# M.C.C. BANK LTD

Estd - 1912

**Admin. Office :** M.C.C. Bank Building, Hampankatta, Mangaluru 575 001
Ph.: 2421369, 2445742, 2445745
Email : ho@mccbank.in Website : www.mccbank.in

## ಮಂಗಳೂರು ಕಥೋಲಿಕ್ ಕೊ–ಅಪರೇಟಿವ್ ಬ್ಯಾಂಕ್ ಲಿ

# ANNUAL REPORT

# ವಾರ್ಷಿಕ ವರದಿ

## 105ನೇ ವಾರ್ಷಿಕ ಸಾಮಾನ್ಯ ಸಭೆ

| ದಿನಾಂಕ | ಸಮಯ | ಸ್ಥಳ |
|---|---|---|
| 24-09-2023<br>ರವಿವಾರ | ಬೆಳಿಗ್ಗೆ ಘಂಟೆ<br>11.00ಕ್ಕೆ | ಲೊಯೊಲಾ ಹಾಲ್, ಸೈಂಟ್ ಅಲೋಶಿಯಸ್<br>ಪದವಿ ಪೂರ್ವ ಕಾಲೇಜು, ಕೊಡಿಯಲ್‌ಬೈಲ್, ಮಂಗಳೂರು |



# BOARD OF DIRECTORS



**Anil Lobo**
Chairman



**Jerald Jude D'Silva**
Vice Chairman

# DIRECTORS



Joseph A Patrao



Andrew D'Souza



Dr Gearld Pinto



David D'Souza



Elroy K Crasto



J P Rodrigues



Hearld J Monteiro



Roshan D'Souza



Irene Rebello



Dr Freeda D'Souza



Melwin Vas



Vincent Lasrado



C G Pinto



Sushanth Saldanha



Sunil Menezes
General Manager (i/c)

Professional Directors



# ಅಧ್ಯಕ್ಷರ ನಲ್ನುಡಿ

ಪ್ರಿಯ ಎಮ್ ಸಿ ಸಿ ಬ್ಯಾಂಕ್ ಕುಟುಂಬದ ಎಲ್ಲಾ ನಲ್ಮೆಯ ಸದಸ್ಯರೇ, ನಿಮಗೆಲ್ಲರಿಗೂ ಒಲುಮೆಯ ಸೊಲುಮೆಗಳು.

ನಿಮ್ಮೊಡನೆ ಮತ್ತೊಮ್ಮೆ ನನ್ನ ಮಾತುಗಳನ್ನು ಹಂಚಿಕೊಳ್ಳಲು ನನಗೆ ಅಪಾರ ಅಭಿಮಾನವೂ ವಿಶ್ವಾಸನೀಯತೆಯೂ ತುಂಬಿ ಬರುತ್ತಿದೆ. ಅಭಿಮಾನ ಏಕೆಂದರೆ ನೀವೆಲ್ಲರೂ ನಮ್ಮ ತಂಡದ ಕೆಲಸದ ಮೇಲೆ ಹಾಗೂ ಸಾಧನೆಗಳ ಮೇಲೆ ಅಪಾರ ವಿಶ್ವಾಸವನ್ನಿಟ್ಟು ನಮ್ಮನ್ನು ಮುಂದಿನ ಐದು ವರ್ಷಗಳಿಗಾಗಿ ಅವಿರೋಧವಾಗಿ ಆಯ್ಕೆ ಮಾಡಿ ಬ್ಯಾಂಕಿನ ನಾಯಕತ್ವ ನಮ್ಮ ತಂಡಕ್ಕೆ ಒಪ್ಪಿಸಿದ್ದೀರಿ. ವಿಶ್ವಾಸನೀಯತೆ ಯಾಕೆಂದರೆ ಸುತ್ತಮುತ್ತಲಿನ ಹಲವು ಒತ್ತಡಗಳ ನಡುವೆಯೂ ನಮ್ಮ ಬ್ಯಾಂಕ್ ಯಾವುದೇ ತೊಂದರೆಗಳಿಲ್ಲದೆ ಭವಿಷ್ಯದತ್ತ ಹಾಗೂ ಯಶಸ್ಸಿನತ್ತ ದಾಪುಗಾಲು ಹಾಕುತ್ತಿದೆ. ವಾಲ್ಟರ್ ಬಾಗ್ಹೋಟ್‌ನ, 'ಸಾಹಸವು ವಾಣಿಜ್ಯದ ಜೀವನಾಡಿ–ಎಚ್ಚರಿಕೆಯು ಬ್ಯಾಂಕಿಂಗಿನ ಜೀವಾಳ' ಎಂಬ ಮಾತಿನಂತೆ ನಿಮ್ಮ ಪರವಾಗಿ ನಾವು ಎಚ್ಚರಿಕೆಯುಳ್ಳ ಸಾಹಸಿಗಳಾಗಿ ಪರಿಶ್ರಮಿಸಿದ್ದೇವೆ. ಅದರ ಫಲವಾಗಿ ಇತ್ತೀಚಿನ ದಿನಗಳಲ್ಲಿ ಅಲ್ಲಲ್ಲಿ ಕಂಡುಬರುವ ಅಪಾಯಕಾರಿ ಪರಿಸ್ಥಿತಿ ನಮ್ಮ ಬ್ಯಾಂಕಿನಲ್ಲಿಲ್ಲ.

ಈ ಎಚ್ಚರಿಕೆ ಮತ್ತು ಸಾಹಸಿತನದ ಚಿಂತನೆಯನ್ನು ನೀವು ಬೆಂಬಲಿಸಿದ ಫಲವಾಗಿ 2018 ರಲ್ಲಿ 3 ಕೋಟಿ 66 ಲಕ್ಷ ಲಾಭ ಮಾಡಿದ್ದ ಬ್ಯಾಂಕ್ 2023 ರಲ್ಲಿ 10 ಕೋಟಿ 38 ಲಕ್ಷ ಲಾಭ ಮಾಡಿದೆ. ಇದು ಒಟ್ಟಾರೆ 183% ದಷ್ಟು ಅಧಿಕ ಲಾಭ. ಪಾಲು ಬಂಡವಾಳ (92% ದಷ್ಟು ಅಧಿಕ), ಮೀಸಲು ನಿಧಿಗಳು, (90% ದಷ್ಟು ಅಧಿಕ), ಠೇವಣಿ (74% ದಷ್ಟು ಅಧಿಕ), ಸಾಲ ಮತ್ತು ಮುಂಗಡಗಳು (65% ದಷ್ಟು ಅಧಿಕ), ಹೂಡಿಕೆ (87% ದಷ್ಟು ಅಧಿಕ), ಮುಂತಾದ ವಿಷಯದಲ್ಲಿಯೂ ಬ್ಯಾಂಕ್ ಅತ್ಯುತ್ತಮ ಸಾಧನೆ ಮಾಡಿದೆ. ಇದು ಸಹಕಾರದ ಫಲ ಯಾರಿಗಾದರೂ ಖುಷಿ ನೀಡುವ ಫಲ.

ವರದಿ ವರ್ಷದಲ್ಲಿ ನಾವು ಬ್ಯಾಂಕಿನ 110 ನೇ ಸಂಸ್ಥಾಪನಾ ವಾರ್ಷಿಕೋತ್ಸವವನ್ನು ಅಪಾರ ಅದ್ದೂರಿಯಿಂದ ಆಚರಿಸಿದೆವು. ಗ್ರಾಹಕರು, ಸಿಬ್ಬಂದಿ, ಹಿಸ್ಸೇದಾರರೊಡನೆ ಹಾಗೂ ಸಾರ್ವಜನಿಕರೊಡನೆ ಸೇರಿಕೊಂಡು ಈ ಸಂಭ್ರಮ ಯಶಸ್ವಿಯಾಗಿ ನಡೆಯಿತು. ಈ ಸಂದರ್ಭದಲ್ಲಿ ಬ್ಯಾಂಕ್ ತನ್ನ ಸಾಮಾಜಿಕ ಕಳಕಳಿಯನ್ನು ಅಭಿವ್ಯಕ್ತಗೊಳಿಸುವುದಕ್ಕಾಗಿ ಬಡ ಕುಟುಂಬಗಳ ಮನೆ ನಿರ್ಮಾಣಕ್ಕೆ, ವೈದ್ಯಕೀಯ ಸೇವೆಗೆ, ಹೆಣ್ಣು ಮಕ್ಕಳ ವಿವಾಹಕ್ಕೆ ಹಾಗೂ ಶಿಕ್ಷಣಕ್ಕೆ ಒಟ್ಟು 90 ಫಲಾನುಭವಿಗಳಿಗೆ ಧನಸಹಾಯ ನೀಡಲಾಗಿದೆ. ಅದೇ ಸಂದರ್ಭದಲ್ಲಿ ಬ್ಯಾಂಕಿನ ಎಲ್ಲಾ 16 ಶಾಖೆಗಳಲ್ಲಿ ಗ್ರಾಹಕರ ಸಮಾವೇಶ ಸಂಘಟಿಸಿ ಬ್ಯಾಂಕಿನ ಬೆಳವಣಿಗೆಯಲ್ಲಿ ಗ್ರಾಹಕರ ಅಭಿಪ್ರಾಯ ಸಂಗ್ರಹಿಸಿದ್ದೇವೆ. ಅವರ ಆಶೋತ್ತರಗಳನ್ನು ತಿಳಿದುಕೊಂಡು ಅವುಗಳನ್ನು ಆದ್ಯತೆಯ ಮೇರೆಗೆ ಅನ್ವಯಗೊಳಿಸಲು ಹೆಜ್ಜೆಗಳನ್ನು ಇಡುತ್ತಿದ್ದೇವೆ.

ಶ್ರಮದ ಫಲಗಳು ರುಚಿಕರ ಎಂದು ಹಿರಿಯರ ನುಡಿ, ನಮ್ಮ ಸಂಘಟಿತ ಶ್ರಮ ಈಗ ಫಲ ಕೊಡುತ್ತಿದೆ. ನಮ್ಮ ಎನ್ ಪಿ ಎ ತೀರಾ ಕಡಿಮೆಯಾಗಿ ನಿಯಂತ್ರಣದಲ್ಲಿರುವುದರ ಫಲವಾಗಿ ನಮ್ಮ ಬ್ಯಾಂಕಿನ ಕಾರ್ಯವ್ಯಾಪ್ತಿಯನ್ನು ಉಡುಪಿ – ದಕ್ಷಿಣ ಕನ್ನಡದಿಂದ ಈಗ ಶಿವಮೊಗ್ಗ, ಚಿಕ್ಕಮಗಳೂರು, ಕೊಡಗು, ಹಾಸನ ಹಾಗೂ ಉತ್ತರ ಕನ್ನಡ ಜಿಲ್ಲೆಗಳನ್ನೂ ಸೇರುವಂತೆ ವಿಸ್ತರಿಸಲಾಗಿದೆ. ಇನ್ನು ಮುಂದೆ ಈ ಹೊಸ ವ್ಯಾಪ್ತಿಗಳಲ್ಲಿ ಬ್ಯಾಂಕಿನ ಶಾಖೆಗಳನ್ನು ಆರಂಭಿಸುವುದಕ್ಕೆ ವ್ಯವಸ್ಥಿತ ಕ್ರಮಗಳನ್ನು ಕೈಗೊಳ್ಳಲಾಗುವುದು.

ಬ್ಯಾಂಕಿನ ಅಗತ್ಯಕ್ಕೆ ತಕ್ಕಂತೆ ಹಾಗೂ ನಿಯಮ ಪಾಲನೆಯಂತೆ ಬ್ಯಾಂಕಿಗೆ ಹೊಸ ಸಿಬ್ಬಂದಿಗಳ ನೇಮಕಾತಿ ಮಾಡಿಕೊಳ್ಳಲಾಗಿದೆ. ಎಲ್ಲಾ ಹೊಸ ಸಿಬಂದಿಗಳಿಗೆ ಇಂಡಕ್ಷನ್ (ವೃತ್ತಿ ಬುನಾದಿ) ಹಾಗೂ ಆನ್ ಗೋಯಿಂಗ್ (ನಿರಂತರ) ತರಬೇತಿಗಳನ್ನು ನೀಡಿ ನಮ್ಮ ಸಿಬ್ಬಂದಿ ಗ್ರಾಹಕ ಸೇವೆಯಲ್ಲಿ ಸಕರಾತ್ಮಕರಾಗುವಂತೆ ಮತ್ತು ಅವರ ಬ್ಯಾಂಕಿಂಗ್ ಜ್ಞಾನ ಗುಣಮಟ್ಟದಾಗಿ ಬೆಳೆಯುವಂತೆ ಪರಿಶ್ರಮಿಸಲಾಗಿದೆ. ಅದೇ ರೀತಿ ಬಹಳ ಕಾಲದಿಂದ ನೆನೆಗುದಿಗೆ ಬಿದ್ದಿದ್ದ ನವ ಕೋರ್ ಬ್ಯಾಂಕಿಂಗ್ ಸೊಲ್ಯೂಷನ್ ಉನ್ನತ ಮಟ್ಟಕ್ಕೆ ಏರಿಸಿ ತಾಂತ್ರಿಕತೆಯನ್ನು ಆಧುನಿಕರಿಸಲಾಗಿದೆ ಹಾಗೂ ಬೆಂಗಳೂರಿನಲ್ಲಿ ನಿಯಮನುಸಾರ ನಮ್ಮ ಬ್ಯಾಂಕಿನ DR Centre ಸ್ಥಾಪಿಸಲಾಗಿದೆ. ಬ್ಯಾಂಕನ್ನು ಸರ್ವೋನ್ನತವಾಗಿ ಅಭಿವೃದ್ದಿಪಡಿಸಲು ಸನ್ನದ್ಧರಾಗಿದ್ದೇವೆ. ಆ ನಿಟ್ಟಿನಲ್ಲಿ ಸರ್ವ ಶಾಖೆಗಳನ್ನು ಅಧುನಿಕರಿಸಲಾಗಿದೆ. ಬ್ಯಾಂಕಿನ ಪ್ರಗತಿಗಾಗಿ ಶ್ರಮಿಸುತ್ತಿರುವ ಸಿಬಂದಿ ವರ್ಗಕ್ಕೆ ವೇತನ ಪರಿಷ್ಕರಣೆಯ ಕಾರ್ಯಯೋಜನೆ ಹಾಕಿಕೊಳ್ಳಲಾಗಿದೆ.

ಈ ಎಲ್ಲಾ ಪ್ರಯತ್ನಗಳಿಂದ ನಮ್ಮ ಅಭಿಮಾನದ ಎಮ್ ಸಿ ಸಿ ಬ್ಯಾಂಕನ್ನು ಉತ್ತುಂಗಕ್ಕೆ ಏರಿಸುವುದಕ್ಕಾಗಿ ನಾವು ದುಡಿದಿದ್ದೇವೆ. ಈ ಪ್ರಯತ್ನಗಳು ಬ್ಯಾಂಕಿನ ಒಳಿತನ್ನೇ ಆಶಿಸುವ ನಿಮ್ಮೆಲ್ಲರ ಜತೆಗಾರಿಕೆಯಲ್ಲಿ ಇನ್ನು ಮುಂದೆಯೂ ನಿರಂತರವಾಗಿರುತ್ತವೆ. ಕಳೆದ 110 ವರ್ಷಗಳಲ್ಲಿ ನಮ್ಮ ಹಿರಿಯರು, ನಾವು ನೀವು ಎಲ್ಲರೂ ಮಾಡಿದ ಪ್ರಯತ್ನಗಳಿಗೆ ಒಂದು ಸ್ಪಷ್ಟ – ಸುವ್ಯವಸ್ಥಿತ ಸಂರಚನೆ ನೀಡಿ ಆದಷ್ಟು ಶೀಘ್ರದಲ್ಲಿ ಈ ಬ್ಯಾಂಕನ್ನು ಅತ್ಯಂತ ಉತ್ಕೃಷ್ಟ ವೃತ್ತಿಪರತೆಯುಳ್ಳ ಬ್ಯಾಂಕಿಂಗ್ ಸೇವೆ ನೀಡುವ ಭಾರತದ ಅತ್ಯುತ್ತಮ ಸಹಕಾರಿ ಬ್ಯಾಂಕುಗಳ ಸಾಲಿನಲ್ಲಿ ನಿಲ್ಲುವಂತೆ ಮಾಡುವುದೇ ನಮ್ಮ ಗುರಿ.

– **ಅನಿಲ್ ಲೋಬೊ,** ಅಧ್ಯಕ್ಷರು

# MCC BANK LTD



## P. F. X Saldanha

(Founder President 1912-1913)

29.04.1860 ★ 23.02.1935

# ಮಂಗಳೂರು ಕಥೋಲಿಕ್ ಕೊ-ಅಪರೇಟಿವ್ ಬ್ಯಾಂಕ್

**ಆಡಳಿತ ಕಛೇರಿ : ಹಂಪನಕಟ್ಟ, ಮಂಗಳೂರು**

## ವಾರ್ಷಿಕ ಸಾಮಾನ್ಯ ಸಭೆಯ ನೋಟೀಸು

ಮಂಗಳೂರು ಕಥೋಲಿಕ್ ಕೊ-ಅಪರೇಟಿವ್ ಬ್ಯಾಂಕ್(ನಿ.) ಇದರ 105ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ದಿನಾಂಕ **24.09.2023 ರವಿವಾರ ಬೆಳಿಗ್ಗೆ 11.00** ಘಂಟೆಗೆ ಸರಿಯಾಗಿ **ಲೊಯೊಲಾ ಹಾಲ್, ಸೈಂಟ್ ಅಲೋಶಿಯಸ್ ಪದವಿ ಪೂರ್ವ ಕಾಲೇಜು, ಕೊಡಿಯಲ್‌ಬೈಲ್, ಮಂಗಳೂರು** ಇಲ್ಲಿ ಜರಗಲಿದ್ದು, ಈ ಕೆಳಗಿನ ವಿಷಯಗಳನ್ನು ಚರ್ಚಿಸಲಾಗುವುದು.

### ಕಾರ್ಯಸೂಚಿ

1. ಸಭೆಯ ನೋಟೀಸನ್ನು ಓದಿ ದಾಖಲಿಸುವುದು (ಪುಟ ಸಂಖ್ಯೆ 3)
2. ಹಿಂದಿನ ಸಾಮಾನ್ಯ ಸಭೆಯ ನಡವಳಿಕೆಗಳನ್ನು ಓದಿ ದೃಢೀಕರಿಸುವುದು
3. 2022–23ನೇ ಸಾಲಿನ ಬ್ಯಾಂಕಿನ ಆಡಳಿತ ಮಂಡಳಿಯ ವರದಿಯನ್ನು ಓದಿ ಅಂಗೀಕರಿಸುವುದು (ಪುಟ ಸಂಖ್ಯೆ 4–5)
4. 2022–23ರ ಲಾಭ ನಷ್ಟ ಹಾಗೂ ಆಸ್ತಿ ಜವಾಬ್ದಾರಿ ತ:ಖ್ತೆಯನ್ನು ಮಂಜೂರು ಮಾಡುವುದು. (ಪುಟ ಸಂಖ್ಯೆ 6–11)
5. 2022–23ನೇ ಸಾಲಿನ ಲೆಕ್ಕ ಪರಿಶೋಧಕರ ವರದಿ ಮತ್ತು ಮಂಡಳಿಯ ಅನುಪಾಲನಾ ವರದಿಯನ್ನು ಪರಿಗಣಿಸುವುದು. (ಪುಟ ಸಂಖ್ಯೆ 12–13)
6. 2023–24ನೇ ಸಾಲಿನ ಆಡಳಿತ ಮಂಡಳಿಯವರು ಸೂಚಿಸಿದ ಕಾರ್ಯವ್ಯವಹಾರಗಳ ಅನುಮೋದನೆ. (ಪುಟ ಸಂಖ್ಯೆ 14)
7. 2022–23ನೇ ಸಾಲಿಗೆ ಮಂಜೂರಾಗಿದ್ದ ಬಜೆಟಿನ ಮಿತಿಗಿಂತ ಹೆಚ್ಚಿಗೆ ಆದ ವೆಚ್ಚವನ್ನು ಮಂಜೂರು ಮಾಡುವುದು. (ಪುಟ ಸಂಖ್ಯೆ 14)
8. 2023–24ನೇ ಸಾಲಿನ ವಾರ್ಷಿಕ ಬಜೆಟನ್ನು ಪರಿಶೀಲಿಸಿ ಮಂಜೂರು ಮಾಡುವುದು. (ಪುಟ ಸಂಖ್ಯೆ 15)
9. 2022–23ನೇ ಸಾಲಿನ ನಿವ್ವಳ ಲಾಭ ವಿಂಗಡನೆಗೆ ಮಂಜೂರಿ ಕೊಡುವುದು. (ಪುಟ ಸಂಖ್ಯೆ 16) ಮಂಜೂರಾತಿ ನೀಡುವುದು.
10. 2023–24ನೇ ಸಾಲಿಗೆ ಶಾಸನಬದ್ಧ ಲೆಕ್ಕಪರಿಶೋಧಕರ ನೇಮಕಾತಿಯ ಅನುಮೋದನೆ. (ಪುಟ ಸಂಖ್ಯೆ 13)
11. ಬ್ಯಾಂಕಿಗೆ ಸದಸ್ಯರನ್ನು ಸೇರಿಸಿಕೊಂಡ ಮತ್ತು ಸದಸ್ಯತ್ವದಿಂದ ಸಮಾಪನೆ ಮಾಡಿರುವ ಬಗ್ಗೆ ವಿವರ (ಪುಟ ಸಂಖ್ಯೆ 16)
12. ಬ್ಯಾಂಕಿನ ಉಪವಿಧಿಗಳಿಗೆ ತಿದ್ದುಪಡಿ (ಪುಟ ಸಂಖ್ಯೆ 17–24)
13. ಸಭಾಧ್ಯಕ್ಷರ ಅನುಮತಿಯ ಮೇರೆಗೆ ಚರ್ಚಿಸಬಹುದಾದ ಇತರೆ ವಿಷಯಗಳು

(ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ)

11.08.2023 **ಮಹಾಪ್ರಬಂಧಕರು (ಪ್ರ)**

**ಸೂಚನೆ:**

1. ಬ್ಯಾಂಕಿನ ಲೆಕ್ಕ ಪತ್ರಗಳಿಗೆ ಸಂಬಂಧಪಟ್ಟ ಹಾಗೂ ಇತರ ಯಾವುದೇ ಮಾಹಿತಿಗಳ ಬಗ್ಗೆ ಸ್ಪಷ್ಟನೆ ಬೇಕಿದ್ದಲ್ಲಿ 5 ದಿವಸಗಳ ಮುಂಚಿತವಾಗಿ ಬ್ಯಾಂಕಿನ ಮಹಾಪ್ರಬಂಧಕರ ಗಮನಕ್ಕೆ ತರತಕ್ಕದ್ದು.
2. **ಸದಸ್ಯರಿಗೆ ಗುರುತಿನ ಚೀಟಿ ಕಡ್ಡಾಯವಾಗಿದೆ. ಸದಸ್ಯರು ಮಹಾಸಭೆಗೆ ಬರುವಾಗ ಗುರುತು ಚೀಟಿಯನ್ನು ಹಾಗೂ ವರದಿ ಪುಸ್ತಕವನ್ನು ತಪ್ಪದೇ ತರಬೇಕಾಗಿ ವಿನಂತಿ.**
3. **ಮಹಾಸಭೆಗೆ ಬ್ಯಾಂಕಿನ ಸದಸ್ಯರಲ್ಲದವರಿಗೆ ಭಾಗವಹಿಸಲು ಅವಕಾಶವಿಲ್ಲ.**

(ಸಭೆಯ ನಂತರ ಸದಸ್ಯರಿಗೆ ಊಟದ ವ್ಯವಸ್ಥೆಯನ್ನು ಮಾಡಲಾಗಿದೆ.)

### ಸದಸ್ಯರ ಗಮನಕ್ಕೆ

1. ಬ್ಯಾಂಕಿನ ಸದಸ್ಯರು ಕಳೆದ ಐದು ವಾರ್ಷಿಕ ಸಾಮಾನ್ಯ ಸಭೆಗಳ ಪೈಕಿ ಎರಡು ಸಭೆಗಳಿಗೆ ಹಾಜರಾಗುವುದು ಅವಶ್ಯಕ
2. ಸದಸ್ಯರು ಬ್ಯಾಂಕಿನ ಉಪವಿಧಿ ಸಂಖ್ಯೆ 20ರಲ್ಲಿ ನಿಗದಿಪಡಿಸಿದ ಕನಿಷ್ಟ ವ್ಯವಹಾರ ಮಾಡುವುದು ಅತ್ಯವಶ್ಯಕ
3. ಸದಸ್ಯರು ಉಳಿತಾಯ ಖಾತೆ ಹೊಂದಿದ್ದಲ್ಲಿ ಮತ್ತು ಅಂತಹ ಖಾತೆಗಳು ಚಾಲ್ತಿಯಲ್ಲಿಲ್ಲದಿದ್ದಲ್ಲಿ ಅಂತಹ ಸದಸ್ಯರು ರಿಜರ್ವ್ ಬ್ಯಾಂಕ್ ನಿರ್ದೇಶನಗಳನ್ವಯ 'ನಿಮ್ಮ ಗ್ರಾಹಕರನ್ನು ತಿಳಿಯಿರಿ' (KYC) ನಿಯಮಗಳಂತೆ ಇತ್ತೀಚಿನ ಭಾವಚಿತ್ರ, ಅಧಾರ್ ಕಾರ್ಡ್ ಅಥವಾ ಇನ್ನಿತರ ವಿಳಾಸದ ಗುರುತಿನ ಪತ್ರ ಮತ್ತು ಪಾನ್ ಕಾರ್ಡ್ ನಕಲು ಪ್ರತಿ ಪೂರೈಸಲು ಕೋರಲಾಗಿದೆ. ಇದರಿಂದ ಸದಸ್ಯರ ಲಾಭಾಂಶ (ಡಿವಿಡೆಂಡ್) ಅವರ ಉಳಿತಾಯ ಖಾತೆಗೆ ನೇರವಾಗಿ ವರ್ಗಾಯಿಸಲು ಅನುಕೂಲವಾಗುವುದು.
4. **ಪ್ರತಿ ಐದು ಲಕ್ಷ ರೂ.ವರೆಗಿನ ಠೇವಣಿಯು, ಡಿಪಾಜಿಟ್ ಇನ್ಸೂರನ್ಸ್ ಮತ್ತು ಕ್ರೆಡಿಟ್ ಗ್ಯಾರಂಟೀ ಕಾರ್ಪೊರೇಶನ್ (DICGC) ಅಡಿಯಲ್ಲಿ ರಕ್ಷಿಸಲ್ಪಟ್ಟಿದೆ.**

ಕಾರ್ಯಸೂಚಿ-3

# ಮಂಗಳೂರು ಕಥೋಲಿಕ್ ಕೊ-ಅಪರೇಟಿವ್ ಬ್ಯಾಂಕ್

**ಆಡಳಿತ ಕಛೇರಿ : ಹಂಪನಕಟ್ಟ, ಮಂಗಳೂರು**

## ವಾರ್ಷಿಕ ವರದಿ

ಬ್ಯಾಂಕಿನ 105ನೇ ವಾರ್ಷಿಕ ಮಹಾಸಭೆಗೆ ಸದಸ್ಯರೆಲ್ಲರನ್ನೂ ಸ್ವಾಗತಿಸುತ್ತಾ, 2022-23ನೇ ಸಾಲಿನ ವಾರ್ಷಿಕ ವರದಿಯನ್ನು ನಿಮ್ಮ ಮುಂದಿಡುತ್ತಿದ್ದೇವೆ. ಎಮ್.ಸಿ.ಸಿ. ಬ್ಯಾಂಕು 7 ಜಿಲ್ಲೆಗಳಲ್ಲಿ ತನ್ನ ಕಾರ್ಯವ್ಯಾಪ್ತಿ ಹೊಂದಿದ್ದು, ಒಟ್ಟು 16 ಶಾಖೆಗಳನ್ನೊಳಗೊಂಡು, ರೂ.577.95 ಕೋಟಿ ಠೇವಣಿ ಹಾಗೂ ರೂ.355.30 ಕೋಟಿ ಸಾಲಗಳನ್ನೊಳಗೊಂಡ ಒಟ್ಟು ರೂ.933.25 ಕೋಟಿ ವ್ಯವಹಾರ ಮಾಡುತ್ತಿದ್ದು, ಈ ವರ್ಷ ದಾಖಲೆಯ ಲಾಭ ಗಳಿಸಿರುತ್ತದೆ. ನಮ್ಮ ಬ್ಯಾಂಕಿನ ಎಲ್ಲಾ ಶಾಖೆಗಳು ಲಾಭ ಗಳಿಸಿರುತ್ತವೆ ಎಂಬುದನ್ನು ಈ ಸಂದರ್ಭದಲ್ಲಿ ಸದಸ್ಯರ ಗಮನಕ್ಕೆ ತರಬಯಸುತ್ತೇವೆ. ಈ ಸಾಧನೆಗೆ ಬ್ಯಾಂಕಿನಲ್ಲಿ ವಿವಿಧ ಸುಧಾರಿತ ಸೌಲಭ್ಯಗಳು ಹಾಗೂ ಗ್ರಾಹಕರಿಗೆ ಕೊಡುವ ಉತ್ತಮ ಸೇವೆಯು ಕಾರಣವಾಗಿರುತ್ತದೆ. ಬ್ಯಾಂಕಿನ ಪ್ರಗತಿಯ ಬಗ್ಗೆ ವಿಶೇಷ ಕಾಳಜಿ ವಹಿಸುತ್ತಿರುವ ಸಮರ್ಥ ಆಡಳಿತ ಮಂಡಳಿ, ಅದಕ್ಕನುಗುಣವಾಗಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ ವರ್ಗದ ಶ್ರಮ, ಸದಸ್ಯರ ಹಾಗೂ ಗ್ರಾಹಕರ ಪ್ರೋತ್ಸಾಹ, ಬೆಂಬಲ ಮತ್ತು ಸಹಕಾರವೂ ಈ ಸಾಧನೆಗೆ ಕಾರಣವಾಗಿರುತ್ತದೆ.

ಪ್ರಸ್ತುತ ಸಹಕಾರಿ ವರ್ಷದ ಆದಾಯ ವೆಚ್ಚದ ವಿವರ ಹಾಗೂ ವಾರ್ಷಿಕ ವರದಿಯೊಂದಿಗೆ ಲೆಕ್ಕ ಪತ್ರದ ಸಂಕ್ಷಿಪ್ತ ಪಟ್ಟಿಯನ್ನು ತಮ್ಮ ಮುಂದೆ ಮಂಡಿಸಲು ಬಯಸುತ್ತೇವೆ. ಕಳೆದ ಐದು ವರ್ಷಗಳಲ್ಲಿ ಬ್ಯಾಂಕಿನ ಸಾಧನೆಯನ್ನು ಈ ಕೆಳಗಿನ ಕೋಷ್ಟಕದಲ್ಲಿ ತೋರಿಸಲಾಗಿದೆ.

**(ರೂ. ಲಕ್ಷಗಳಲ್ಲಿ)**

| ಕ್ರ. ಸಂ. | ವಿವರಗಳು | ವರ್ಷಾಂತ್ಯಕ್ಕೆ | | | | |
|---|---|---|---|---|---|---|
| | | 31.03.2019 | 31.03.2020 | 31.03.2021 | 31.03.2022 | 31.03.2023 |
| 1. | ಪಾಲು ಬಂಡವಾಳ | 1429.97 | 1604.49 | 1843.32 | 1842.78 | 2736.15 |
| 2. | ಮೀಸಲು ನಿಧಿ ಮತ್ತು ಇತರ ನಿಧಿಗಳು | 3388.39 | 4187.90 | 4406.90 | 5006.27 | 6418.85 |
| 3. | ಠೇವಣಿ | 33317.32 | 39430.41 | 45684.85 | 53208.63 | 57794.91 |
| 4. | ಸಾಲ ಮತ್ತು ಮುಂಗಡ | 21545.74 | 26506.38 | 30661.41 | 32856.15 | 35530.43 |
| 5. | ಹೂಡಿಕೆ | 14799.90 | 16757.37 | 18872.94 | 24731.64 | 27624.63 |
| 6. | ನಿವ್ವಳ ಲಾಭ | 521.21 | 245.88 | 596.73 | 827.40 | 1038.82 |
| 7. | ನಿವ್ವಳ ಎನ್‌ಪಿಎ | 3.49% | 7.17% | 1.92% | 1.62% | 1.37% |

**ದುಡಿಯುವ ಬಂಡವಾಳ :** 2023 ವರ್ಷದ ಅಂತ್ಯಕ್ಕೆ ಬ್ಯಾಂಕಿನ ಒಟ್ಟು ದುಡಿಯುವ ಬಂಡವಾಳವು ರೂ.684.31 ಕೋಟಿ ಇರುತ್ತದೆ.

**ಸಾಲ ಮತ್ತು ಠೇವಣಿ ಅನುಪಾತ :** 2023 ವರ್ಷದ ಅಂತ್ಯಕ್ಕೆ ಬ್ಯಾಂಕಿನ ಸಾಲ ಮತ್ತು ಠೇವಣಿ ಅನುಪಾತವು 61.75% ಆಗಿರುತ್ತದೆ.

2023 ವರ್ಷದ ಅಂತ್ಯಕ್ಕೆ ಅನುತ್ಪಾದಕ ಸಾಲಕ್ಕೆ ಒದಗಿಸಿದ ಅವಕಾಶದ ಅನುಪಾತವು (Provision coverage ratio) 78.87% ಆಗಿರುತ್ತದೆ.

**ಆಡಳಿತ:** ವರದಿ ವರ್ಷದಲ್ಲಿ ವ್ಯವಸ್ಥಾಪನ ಸಮಿತಿಯ 39 ಸಭೆಗಳು, ಆಡಳಿತ ಮಂಡಳಿಯ 20 ಸಭೆಗಳು ಜರುಗಿದ್ದು, ಸಾಲ ಮಂಜೂರಾತಿ ಸಮಿತಿಯ 51 ಸಭೆಗಳು, ಆಡಿಟ್ ಸಮಿತಿಯ 6 ಹಾಗೂ ಕಾರ್ಯಕಾರಿ ಸಮಿತಿಯ 4 ಸಭೆಗಳು ಜರುಗಿರುತ್ತವೆ.

**CRAR ಪ್ರಮಾಣ :** ಬ್ಯಾಂಕಿನ CRAR ಪ್ರಮಾಣವು ಕಳೆದ ವರ್ಷದಲ್ಲಿ ಶೇಕಡಾ 15.47 ಆಗಿದ್ದು, ವರದಿ ವರ್ಷದಲ್ಲಿ ಶೇಕಡಾ 21.75 ಇದ್ದು, ಇದು ರಿಸರ್ವ್ ಬ್ಯಾಂಕಿನವರು ನಿಗದಿಪಡಿಸಿದ ಕನಿಷ್ಟ ಮಿತಿ ಶೇ 9ಕ್ಕಿಂತ ಹೆಚ್ಚಿರುತ್ತದೆ. ಇದರ ಮುಖೇನ ಬ್ಯಾಂಕ್ ಸುಧೃಡವಾಗಿದೆ ಎಂಬುದನ್ನು ತೋರಿಸುತ್ತದೆ.

**ಆಡಿಟ್ ವರ್ಗೀಕರಣ:** ಸತತ 12 ವರ್ಷಗಳಿಂದ ಬ್ಯಾಂಕ್ ಲೆಕ್ಕ ಪರಿಶೋಧನೆಯಲ್ಲಿ 'A' ಶ್ರೇಣಿಯ ಸಹಕಾರಿ ಸಂಘವಾಗಿ ಗುರುತಿಸಲ್ಪಟ್ಟಿದ್ದು, ಬ್ಯಾಂಕ್ ಆರ್ಥಿಕವಾಗಿ ಸುಧೃಡವಾಗಿದೆ ಎಂಬುದನ್ನು ತೋರಿಸುತ್ತದೆ.

* ವರದಿ ವರ್ಷದಲ್ಲಿ ಬ್ಯಾಂಕಿನ ಕಾರ್ಯಕ್ಷೇತ್ರವನ್ನು ಹೆಚ್ಚುವರಿ ಐದು ಜಿಲ್ಲೆಗಳಿಗೆ ವಿಸ್ತರಿಸಲಾಗಿದೆ. ಆ ಜಿಲ್ಲೆಗಳು – ಉತ್ತರ ಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು, ಹಾಸನ ಮತ್ತು ಕೊಡಗು ಆಗಿವೆ. ಈ ಮುಖಾಂತರ ಬ್ಯಾಂಕಿನ ಕಾರ್ಯಕ್ಷೇತ್ರವು 7 ಜಿಲ್ಲೆಗಳಿಗೆ ವಿಸ್ತರಿಸಿದಂತಾಯಿತು. ಈ ಜಿಲ್ಲೆಗಳಲ್ಲಿ ಬ್ಯಾಂಕಿನ ವ್ಯವಹಾರವನ್ನು ಹೆಚ್ಚಿಸಲು ಹಾಗೂ ಬ್ಯಾಂಕಿನ ಶಾಖೆಗಳನ್ನು ಮುಂದಿನ ದಿನಗಳಲ್ಲಿ ಆರಂಭಿಸಲು ಸಹಕಾರಿಯಾಗಲಿದೆ.
* ಬ್ಯಾಂಕಿನ ಇತಿಹಾಸದಲ್ಲೇ ಪ್ರಥಮವಾಗಿ ಸಂಸ್ಥಾಪಕರ ದಿನವನ್ನು ದಿನಾಂಕ 08.05.2022ರಂದು ಆಚರಿಸಲಾಯಿತು.
* ಬ್ಯಾಂಕಿನ ಆರ್ಥಿಕ ಪ್ರಗತಿ ಪರಿಶೀಲನಾ ಸಭೆಯನ್ನು ದಿನಾಂಕ 25.06.2022ರಂದು ನಡೆಸಲಾಯಿತು. ಈ ಸಂದರ್ಭದಲ್ಲಿ ಪದ್ಮಶ್ರೀ ಪ್ರಶಸ್ತಿ ವಿಜೇತ ಶ್ರೀ ಹರೇಕಳ ಹಾಜಬ್ಬರವರನ್ನು ಸನ್ಮಾನಿಸಲಾಯಿತು. ಅತ್ಯುತ್ತಮ ಕಾರ್ಯನಿರ್ವಹಣೆಯ ಶಾಖೆಗಳಿಗೆ ಪುಷ್ಪಗುಚ್ಛ, ಸ್ಮರಣಿಕೆ ಮತ್ತು ನಗದು ಬಹುಮಾನ ನೀಡಿ ಸನ್ಮಾನಿಸಲಾಯಿತು. ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಶಿಕ್ಷಣದಲ್ಲಿ ಅತ್ಯಧಿಕ ಅಂಕ ಪಡೆದ ನಿರ್ದೇಶಕರ ಹಾಗೂ ಸಿಬ್ಬಂದಿಗಳ ಮಕ್ಕಳನ್ನು ಪ್ರಶಸ್ತಿ ಪತ್ರ ನೀಡಿ ಗೌರವಿಸಲಾಯಿತು.
* 2022, ಅಗಸ್ಟ್ ತಿಂಗಳಿನಿಂದ ಅಕ್ಟೋಬರ್ ತಿಂಗಳವರೆಗೆ ಬ್ಯಾಂಕಿನ ಎಲ್ಲಾ 16 ಶಾಖೆಗಳಲ್ಲಿ ಗ್ರಾಹಕರ ಸಭೆಯನ್ನು ಏರ್ಪಡಿಸಲಾಯಿತು. ಈ ಸಂದರ್ಭದಲ್ಲಿ ಗ್ರಾಹಕರ ಕುಂದು ಕೊರತೆಗಳನ್ನು ಆಲಿಸಿ ಪರಿಹಾರ ನೀಡಲಾಯಿತು.

* ಹರ್ ಘರ್ ತಿರಂಗ ಅಭಿಯಾನವನ್ನು ದಿನಾಂಕ 13.08.2022ರಿಂದ ದಿನಾಂಕ 15.08.2022ರವರೆಗೆ ಬ್ಯಾಂಕಿನ ಸಿಬ್ಬಂದಿಗಳು ಮತ್ತು ಗ್ರಾಹಕರಿಗೆ ರಾಷ್ಟ್ರ ದ್ವಜವನ್ನು ವಿತರಿಸುವ ಮೂಲಕ ಆಚರಿಸಲಾಯಿತು.
* ದಿನಾಂಕ 15.08.2022ರಂದು ಬ್ಯಾಂಕಿನ ಚರಿತ್ರೆಯಲ್ಲಿ ಪ್ರಥಮ ಬಾರಿಗೆ ಬ್ಯಾಂಕಿನಲ್ಲಿ ದ್ವಜಾರೋಹಣ ಮಾಡುವ ಮುಖಾಂತರ 'ಅಜಾದಿ ಕಾ ಅಮೃತ ಮಹೋತ್ಸವ –2022' ಆಚರಿಸಲಾಯಿತು. ಎಸ್‌ಎಸ್‌ಎಲ್‌ಸಿ (ಸಿಬಿಎಸ್‌ಇ ಮತ್ತು ಐಸಿಎಸ್‌ಇ)ಯಲ್ಲಿ ಅತ್ಯಧಿಕ ಅಂಕ ಪಡೆದ ಸಿಬ್ಬಂದಿಗಳ ಮಕ್ಕಳನ್ನು ಪ್ರಶಸ್ತಿ ಪತ್ರ ನೀಡಿ ಸನ್ಮಾನಿಸಲಾಯಿತು.
* ಬ್ಯಾಂಕಿನ ವಾರ್ಷಿಕ ಮಹಾಸಭೆಯನ್ನು ದಿನಾಂಕ 25.09.2022ರಂದು ನಗರದ ಸಂತ ಅಲೋಶಿಯಸ್ ಪಿ.ಯು. ಕಾಲೇಜು ಹಾಲ್‌ನಲ್ಲಿ ನಡೆಸಲಾಯಿತು.
* ಬ್ಯಾಂಕಿನ ವ್ಯವಸ್ಥಾಪಕರು ಹಾಗೂ ಎಲ್ಲಾ ವರ್ಗದ ಸಿಬ್ಬಂದಿಗಳಿಗೆ ದಿನಾಂಕ 13.06.2022, 27.08.2022, 31.08.2022, 13.09.2022, 11.11.2022 ಹಾಗೂ 12.11.2022ರಂದು ಬ್ಯಾಂಕಿನ ಸಿಬ್ಬಂದಿ ತರಬೇತಿ ಕೇಂದ್ರದಲ್ಲಿ ವಿವಿಧ ತರಬೇತಿಯನ್ನು ನೀಡಲಾಯಿತು.
* ಅದಲ್ಲದೆ ದಿನಾಂಕ 20.06.2022ರಿಂದ 24.06.202ರವರೆಗೆ ಬೆಂಗಳೂರಿನ ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ಮತ್ತು ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆ (ಆರ್.ಐ.ಸಿ.ಎಂ.)ಯ ಜಂಟಿ ಸಹಯೋಗದೊಂದಿಗೆ ಪಟ್ಟಣ ಸಹಕಾರ ಬ್ಯಾಂಕುಗಳ ಅಧಿಕಾರಿಗಳಿಗೆ ಪ್ರಾರಂಭಿಸಿದ 'ನಿರ್ವಹಣೆ ಅಭಿವೃದ್ಧಿ ತರಬೇತಿ'ಗೆ ನಮ್ಮ ಬ್ಯಾಂಕಿನ 2 ಶಾಖಾ ವ್ಯವಸ್ಥಾಪಕರನ್ನು ಹಾಗೂ ಒಬ್ಬ ಹಿರಿಯ ವ್ಯವಸ್ಥಾಪಕರನ್ನು ಕಳುಹಿಸಲಾಗಿದೆ.
* ಬ್ಯಾಂಕಿನ ಶತಮಾನೋತ್ತರ ದಶಮಾನೋತ್ಸವದ ಪ್ರಯುಕ್ತ ಸಮಾಜದ ಅಶಕ್ತ ವರ್ಗದವರ ಚಿಕಿತ್ಸೆ, ಉನ್ನತ ಶಿಕ್ಷಣ, ವಸತಿ ಮತ್ತು ಹೆಣ್ಣು ಮಕ್ಕಳ ಮದುವೆ ವೆಚ್ಚ ಸೇರಿದಂತೆ 90 ಅಶಕ್ತ ಕುಟುಂಬಗಳಿಗೆ 15 ಲಕ್ಷ ಮೊತ್ತದ ದೇಣಿಗೆ ವಿತರಣಾ ಕಾರ್ಯಕ್ರಮವನ್ನು ದಿನಾಂಕ 26.11.2022ರಂದು ನಡೆಸಲಾಯಿತು.
* ಬ್ಯಾಂಕಿನ ಶತಮಾನೋತ್ತರ ದಶಮಾನೋತ್ಸವ ಸಮಾರಂಭವನ್ನು ದಿನಾಂಕ 27.11.2022ರಂದು ಮಿಲಾಗ್ರಿಸ್ ಕಾಲೇಜು ಮೈದಾನದಲ್ಲಿ ವಿಜೃಂಭಣೆಯಿಂದ ಆಚರಿಸಲಾಯಿತು.
* ಬ್ಯಾಂಕಿನ ನಿರ್ದೇಶಕರು ಮತ್ತು ಸಿಬ್ಬಂದಿಗಳಿಗೆ ದಿನಾಂಕ 31.01.2023ರಂದು ಪ್ರವಾಸ ಕಾರ್ಯಕ್ರಮ (ಪಿಕ್‌ನಿಕ್) ಏರ್ಪಡಿಸಲಾಯಿತು.
* ಹೊಸದಾಗಿ ನೇಮಕಗೊಂಡ ಸಿಬ್ಬಂದಿಯವರಿಗೆ ದಿನಾಂಕ 23.02.2023 ರಿಂದ 25.02.2023ರವರೆಗೆ ಪ್ರವೇಶ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.
* ಬ್ಯಾಂಕಿನ ಆಡಳಿತ ಕಛೇರಿಯ ಸಭಾಂಗಣದಲ್ಲಿ ಮಹಿಳಾ ಸಿಬ್ಬಂದಿಯವರ ನಿಸ್ವಾರ್ಥ ಸೇವೆಯನ್ನು ಗುರುತಿಸಿ ದಿನಾಂಕ 11.03.2023ರಂದು ಮಹಿಳಾ ದಿನಾಚರಣೆಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಮಹಿಳಾ ಶಾಖಾ ವ್ಯವಸ್ಥಾಪಕರು ಮತ್ತು ನಿರ್ದೇಶಕರನ್ನು ಶಾಲು ಹೊದಿಸಿ, ಪುಷ್ಪಗುಚ್ಛ ಹಾಗೂ ಸ್ಮರಣಿಕೆ ನೀಡಿ ಸನ್ಮಾನಿಸಲಾಯಿತು ಹಾಗೂ ಎಲ್ಲಾ ಮಹಿಳಾ ಸಿಬ್ಬಂದಿಯನ್ನು ಪುಷ್ಪಗುಚ್ಛ ನೀಡಿ ಗೌರವಿಸಲಾಯಿತು.
* ವರದಿ ವರ್ಷದಲ್ಲಿ 105 ಸಿಬ್ಬಂದಿಗಳು ಬ್ಯಾಂಕಿನಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಎಲ್ಲಾ ಸಿಬ್ಬಂದಿ ವರ್ಗದವರಿಗೆ ಮತ್ತು ಅವರ ಕುಟುಂಬ ಸದಸ್ಯರಿಗೆ ಆರೋಗ್ಯ ವಿಮೆಯನ್ನು ತಲಾ ರೂ. 3,00,000/– ವರೆಗೆ ಮಾಡಲಾಗಿದೆ ಹಾಗೂ ಸಿಬ್ಬಂದಿ ವರ್ಗದರಿಗೆ ಅಪಘಾತ ವಿಮೆಯನ್ನು ತಲಾ ರೂ. 5,00,000/–ವರೆಗೆ ಮಾಡಿಸಲಾಯಿತು.
* ವರದಿ ವರ್ಷದಲ್ಲಿ ಕೋರ್ ಬ್ಯಾಂಕಿಂಗ್ ವ್ಯವಸ್ಥೆಯನ್ನು ಉನ್ನತ ಮಟ್ಟಕ್ಕೆ ಏರಿಸಲಾಯಿತು.
* 24 ತಾಸುಗಳಲ್ಲಿ ವಾಹನ ಸಾಲ ನೀಡುವ ವ್ಯವಸ್ಥೆಯನ್ನು ಈ ವರ್ಷವೂ ಮುಂದುವರಿಸಲಾಗಿದೆ. ಎಲ್ಲಾ ಸಾಲಗಳನ್ನು ಇಎಮ್‌ಐ ಸೌಲಭ್ಯದಡಿ ನೀಡುವ ವ್ಯವಸ್ಥೆಯು ವರದಿ ವರ್ಷದಲ್ಲಿ ಮುಂದುವರಿಸಲಾಗಿದೆ. ಚಿನ್ನದ ಮೇಲಿನ ಸಾಲ, ಅಡಮಾನ ಸಾಲ, ವ್ಯಾಪಾರ ಹಾಗೂ ವಾಹನ ಸಾಲಗಳ ಮೇಲೆ ಸ್ಪರ್ಧಾತ್ಮಕ ಬಡ್ಡಿ ದರವನ್ನು ವಿಧಿಸಲಾಗುತ್ತಿದೆ.
* ವರದಿ ವರ್ಷದಲ್ಲಿ ಬ್ಯಾಂಕಿನ ಸದಸ್ಯರ ಮಕ್ಕಳಿಗೆ ಉನ್ನತ ವ್ಯಾಸಂಗಕ್ಕಾಗಿ ಶೇಕಡಾ 8.75 ಬಡ್ಡಿ ದರದಲ್ಲಿ ಸಾಲ ನೀಡುವ ಯೋಜನೆಯನ್ನು ಹಮ್ಮಿಕೊಳ್ಳಲಾಯಿತು.
* ವರದಿ ವರ್ಷದಲ್ಲಿ ಬ್ಯಾಂಕಿನಲ್ಲಿ ನಡೆಯುವ ವಿವಿಧ ಕಾರ್ಯಕ್ರಮಗಳನ್ನು ತೋರಿಸುವ ಬ್ಯಾಂಕಿನ ಎರಡು ಬುಲೆಟಿನ್‌ಗಳನ್ನು ಪ್ರಕಟಿಸಲಾಯಿತು.

ಬ್ಯಾಂಕಿನ ಅಭಿವೃದ್ಧಿಗೆ ಸೂಕ್ತವಾದ ಸಲಹೆ, ಸೂಚನೆ ಹಾಗೂ ಮಾರ್ಗದರ್ಶನವನ್ನು ಸೂಕ್ತ ಸಮಯದಲ್ಲಿ ನೀಡುತ್ತಿರುವ ಭಾರತೀಯ ರಿಸರ್ವ್ ಬ್ಯಾಂಕಿನ ಅಧಿಕಾರಿಗಳಿಗೆ, ಸಹಕಾರಿ ಇಲಾಖೆಯ ಎಲ್ಲಾ ಅಧಿಕಾರಿಗಳಿಗೆ, ಅಂತರಿಕ ಲೆಕ್ಕ ಪರಿಶೋಧಕರಿಗೆ, ಶಾಸನಬದ್ದ ಲೆಕ್ಕಪರಿಶೋಧಕರಿಗೆ, ಕಾನೂನು ಸಲಹೆಗಾರರಿಗೆ, ಸ್ಥಿರಾಸ್ತಿ ಹಾಗೂ ವಾಹನ ಮೌಲ್ಯಮಾಪಕರುಗಳಿಗೆ ನಮ್ಮ ಹೃದಯಪೂರ್ವಕ ವಂದನೆಗಳನ್ನು ಸಲ್ಲಿಸುತ್ತೇವೆ.

ಬ್ಯಾಂಕಿನ ಸರ್ವತೋಮುಖ ಅಭಿವೃದ್ದಿಗಾಗಿ ಶ್ರಮಿಸುತ್ತಿರುವ ಆಡಳಿತ ಮಂಡಳಿಯ ಸದಸ್ಯರು, ಸಿಬ್ಬಂದಿ ವರ್ಗ, ಸಲಹೆಗಾರರು, ಠೇವಣಿದಾರರು, ಬ್ಯಾಂಕಿನ ಎಲ್ಲಾ ಗ್ರಾಹಕರಿಗೆ ಹಾಗೂ ಸದಸ್ಯರಿಗೆ, ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕಾರ ಸಲಹೆಗಳನ್ನು ನೀಡುತ್ತಿರುವ ಬ್ಯಾಂಕಿನ ಹಿತೈಷಿಗಳಿಗೆ ಹಾಗೂ ಹಿತಚಿಂತಕರಿಗೂ ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇವೆ. 111 ವರ್ಷಗಳನ್ನು ಪೂರೈಸುತ್ತಿರುವ ಈ ಬ್ಯಾಂಕು ಇನ್ನೂ ಉತ್ತುಂಗಕ್ಕೆ ಏರಿ, ಒಂದು ಮಾದರಿ ಬ್ಯಾಂಕ್ ಆಗಿ ಹೊರ ಹೊಮ್ಮಲಿ ಎಂದು ಶುಭ ಹಾರೈಸುತ್ತಾ, ಇದುವರೆಗೆ ನಮಗೆ ಸಂಪೂರ್ಣ ಸಹಕಾರ ನೀಡಿ ಬ್ಯಾಂಕಿನ ಏಳಿಗೆಗೆ ಕಾರಣೀಕರ್ತರಾದ ತಾವುಗಳು ಇನ್ನು ಮುಂದೆಯೂ ಬ್ಯಾಂಕನ್ನು ಪ್ರಗತಿ ಪಥದಲ್ಲಿ ಬೆಳೆಸಲು ಸಹಕಾರ ನೀಡಬೇಕಾಗಿ ತಮ್ಮಲ್ಲಿ ವಿನಂತಿಸುತ್ತೇವೆ.

ಆಡಳಿತ ಮಂಡಳಿಯ ಪರವಾಗಿ,

**ಅನಿಲ್ ಲೋಬೊ,**
ಅಧ್ಯಕ್ಷರು

ಕಾರ್ಯಸೂಚಿ–4

# ಮಂಗಳೂರು ಕಥೋಲಿಕ್ ಕೊ–ಅಪರೇಟಿವ್ ಬ್ಯಾಂಕ್

**ಆಡಳಿತ ಕಛೇರಿ : ಹಂಪನಕಟ್ಟ, ಮಂಗಳೂರು**

**ದಿನಾಂಕ 31.03.2023ಕ್ಕೆ ಇದ್ದಂತೆ ಲಾಭ ಮತ್ತು ನಷ್ಟದ ತ:ಖ್ತೆ** Profit and Loss Account as on 31.03.2023

| ದಿನಾಂಕ 31.03.2022ಕ್ಕೆ ಇದ್ದಂತೆ | ವೆಚ್ಚ ವಿವರಗಳು | 31.03.2023 ಮೊತ್ತ | ದಿನಾಂಕ 31.03.2022ಕ್ಕೆ ಇದ್ದಂತೆ | ಆದಾಯ ವಿವರಗಳು | 31.03.2023 ಮೊತ್ತ |
|---|---|---|---|---|---|
| 27,59,12,348.10 | ಠೇವಣಿ ಮತ್ತು ಸಾಲದ ಮೇಲಿನ ಬಡ್ಡಿ<br>Interest on Deposits, Borrowings, etc | 28,08,66,220.88 | 34,59,42,851.61 | ಸಾಲಗಳ ಮೇಲಿನ ಬಡ್ಡಿ<br>Interest received on loans | 33,29,82,916.07 |
| 4,95,64,453.46 | ಸಂಬಳ, ಭತ್ಯೆಗಳು ಮತ್ತು ಭವಿಷ್ಯ ನಿಧಿ<br>Salaries, Allowances & Provident Fund | 5,15,32,264.52 | 15,13,04,013.02 | ಹೂಡಿಕೆಗಳ ಮೇಲಿನ ಬಡ್ಡಿ<br>Interest on investments | 17,47,57,618.96 |
| 6,20,103.00 | ನಿರ್ದೇಶಕರ ಭತ್ಯೆಗಳು<br>Directors' Allowance & TA DA | 8,83,706.90 | | | |
| | | | 9,36,619.41 | ಕಮಿಷನ್, ವಿನಿಮಯ ಮತ್ತು ಬ್ರೋಕರೇಜ್<br>Commission and Brokerage | 10,31,433.24 |
| 1,74,54,308.78 | ಬಾಡಿಗೆ, ತೆರಿಗೆ, ವಿಮೆ, ವಿದ್ಯುತ್ ಖರ್ಚು<br>Rent, Taxes, Insurance, Lighting | 1,83,10,353.11 | 1,70,93,287.18 | ಇತರ ಆದಾಯ<br>Other Receipts | 1,92,50,915.31 |
| 8,77,750.00 | ಕಾನೂನು ವೆಚ್ಚ<br>Law Charges | 11,79,550.00 | | | |
| 22,60,737.28 | ಅಂಚೆ, ತಂತಿ, ದೂರವಾಣಿ ಖರ್ಚುಗಳು<br>Postage, Telegrams and telephone charges | 23,79,735.22 | | | |

| | | | | | |
|---|---|---|---|---|---|
| 2,75,988.00 | ಲೆಕ್ಕ ಪರಿಶೋಧನಾ ಶುಲ್ಕ Audit Fees | 49,050.00 | | | |
| 1,33,60,785.98 | ದುರಸ್ತಿ ನವೀಕರಣ ಮತ್ತು ಸವಕಳಿ Repairs & Depreciation | 1,60,06,228.43 | | | |
| | ಮುದ್ರಣ ಮತ್ತು ಲೇಖನ ಸಾಮಗ್ರಿ (Printing & Stationery) | 28,56,351.26 | | | |
| 26,27,942.35 | ಜಾಹಿರಾತು Advertisement | 25,61,513.58 | | | |
| 1,36,42,331.02 | ಇತರ ವೆಚ್ಚಗಳು / Other expenses | 1,89,50,028.92 | | | |
| 5,59,39,940.86 | ಹೊಣೆಗಾರಿಕೆ ನಿಬಂಧನೆಗಳು Provisions | 2,85,66,293.74 | | | |
| **8,27,40,082.39** | ತೆರಿಗೆ ನಂತರ ನಿವ್ವಳ ಲಾಭ **Net profit after Tax** | **10,38,81,587.02** | | | |
| **51,52,76,771.22** | | **52,80,22,883.58** | **51,52,76,771.22** | | **52,80,22,883.58** |

| | | | | |
|---|---|---|---|---|
| ಸಹಿ/– | ಸಹಿ/– | ಸಹಿ/– | ಸಹಿ/– | ಲಿಲಾಧರ್ ಮತ್ತು ಕಂ. |
| **ಸುನಿಲ್ ಐ. ಮಿನೇಜಸ್** | **ಡಾ। ಜೆರಾಲ್ಡ್ ಪಿಂಟೊ** | **ಜೆರಾಲ್ಡ್ ಜೂಡ್ ಡಿ'ಸಿಲ್ವಾ** | **ಅನಿಲ್ ಲೋಬೊ** | ಚಾರ್ಟರ್ಡ್ ಅಕೌಂಟೆಂಟ್ಸ್ FRN : 001861S |
| ಪ್ರಭಾರ ಮಹಾಪ್ರಬಂಧಕರು | ನಿರ್ದೇಶಕರು | ಉಪಾಧ್ಯಕ್ಷರು | ಅಧ್ಯಕ್ಷರು | ಇವರ ಪರವಾಗಿ |

ಸ್ಥಳ: ಮಂಗಳೂರು
ದಿನಾಂಕ: 22–06–2023

ಸಹಿ/–
**(ಲಕ್ಷೀಶ ಎನ್. – ಪಾಲುದಾರ) Member No. 026873**
**UDIN: 23026873BGYGKF6391**

- 2019–20 ರಿಂದ ಲಾಭಾಂಶವನ್ನು (ಡಿವಿಡೆಂಡ್) ಪಡೆಯದ ಸದಸ್ಯರು ತಮ್ಮ ಹತ್ತಿರದ ಶಾಖೆಗಳನ್ನು ಅಥವಾ ಪ್ರಧಾನ ಕಛೇರಿಯನ್ನು ಸಂಪರ್ಕಿಸಿ ಪಡೆಯಬೇಕಾಗಿ ವಿನಂತಿ. ಲಾಭಾಂಶವನ್ನು ಘೋಷಿಸಿದ ತಾರೀಕಿನಿಂದ 3 ವರ್ಷದ ಒಳಗಾಗಿ ಸದಸ್ಯರು ಲಾಭಾಂಶವನ್ನು (ಡಿವಿಡೆಂಡ್) ಪಡೆಯದೇ ಇದ್ದಲ್ಲಿ ನಿಯಮಗಳಿಗನುಸಾರವಾಗಿ ಅಂತಹ ಮೊಬಲಗನ್ನು ಮೀಸಲು ನಿಧಿಗೆ (ರಿಸರ್ವ್ ಫಂಡ್) ಜಮಾ ಮಾಡಲಾಗುವುದು. ಅದ್ದರಿಂದ ಸದಸ್ಯರು ಡಿವಿಡೆಂಡ್ ಪಡೆಯಲು ಇದೇ ಅಂತಿಮ ನೋಟಿಸು ಎಂದು ಪರಿಗಣಿಸುವುದು. ಈ ಬಗ್ಗೆ ಸದಸ್ಯರಿಗೆ ಪ್ರತ್ಯೇಕ ನೋಟಿಸು ಕಳುಹಿಸಲಾಗುವುದಿಲ್ಲ.
- ಭಾರತೀಯ ರಿಜರ್ವ್ ಬ್ಯಾಂಕಿನ ಆದೇಶದನ್ವಯ ಬ್ಯಾಂಕಿನಲ್ಲಿ ಹೊಂದಿದ 10 ವರ್ಷ ಮತ್ತು ಮೇಲ್ಪಟ್ಟು ಅವಧಿಯವರೆಗೆ ವ್ಯವಹಾರ ನಡೆಸದೇ ಇರುವ (in operative account) ಎಲ್ಲಾ ಠೇವಣಿಗಳನ್ನು ಡಿಪಾಜಿಟ್ ಎಜ್ಯುಕೇಶನ್ ಅವೇರ್‌ನೆಸ್ ಸ್ಕೀಮ್ 2014ರನ್ವಯ ಭಾರತೀಯ ರಿಜರ್ವ್ ಬ್ಯಾಂಕಿಗೆ ಪ್ರತಿ ತಿಂಗಳು ವರ್ಗಾಯಿಸಬೇಕಾಗುತ್ತದೆ. ಆದುದರಿಂದ ಎಲ್ಲಾ ಗ್ರಾಹಕರು ತಮ್ಮ ಎಲ್ಲಾ ಠೇವಣಿಗಳು ಚಾಲ್ತಿ ಇರುವಂತೆ ನೋಡಿಕೊಳ್ಳಬೇಕು.

ಕಾರ್ಯಸೂಚಿ–4

# ಮಂಗಳೂರು ಕಥೋಲಿಕ್ ಕೊ–ಆಪರೇಟಿವ್ ಬ್ಯಾಂಕ್

**ಆಡಳಿತ ಕಛೇರಿ : ಹಂಪನಕಟ್ಟ, ಮಂಗಳೂರು**

## ದಿನಾಂಕ 31.03.2023ಕ್ಕೆ ಇದ್ದಂತೆ ಆಸ್ತಿ ಮತ್ತು ಹೊಣೆಗಾರಿಕೆ ತ:ಖ್ತೆ Balance Sheet as on 31.03.2023

| ಹಿಂದಿನ ಸಾಲಿನ ಮೊಬಲಗು | ಜವಾಬ್ದಾರಿಗಳು (Liabilities) ವಿವರಗಳು | ಪ್ರಸಕ್ತ ಸಾಲಿನ ಮೊಬಲಗು ಮೊತ್ತ | ಹಿಂದಿನ ಸಾಲಿನ ಮೊಬಲಗು | ಆಸ್ತಿಗಳು (Assets) ವಿವರಗಳು | ಪ್ರಸಕ್ತ ಸಾಲಿನ ಮೊಬಲಗು ಮೊತ್ತ |
|---|---|---|---|---|---|
| | | | | **ನಗದು Cash & Bank Balance** | |
| 18,42,78,200.00 | ಪಾಲು ಬಂಡವಾಳ (Share Capital) | 27,36,14,700.00 | 95,14,415.00 | ಕೈಯಲ್ಲಿರುವ ನಗದು Cash in hand | 99,85,594.00 |
| | | | 1,00,52,300.00 | ಎಟಿಎಮ್‌ನಲ್ಲಿರುವ ನಗದು (Cash at ATM) | 85,64,600.00 |
| 47,30,06,404.62 | ಮೀಸಲು ನಿಧಿ ಮತ್ತು ಇತರ ನಿಧಿಗಳು **Reserve Fund & other Reserves** | 64,18,84,662.26 | 4,11,34,301.22 | ಇತರ ಬ್ಯಾಂಕುಗಳಲ್ಲಿರುವ ನಗದು Cash at other banks | 7,80,77,095.96 |
| | **ಠೇವಣಿಗಳು Deposits** | | | ಇತರ ಬ್ಯಾಂಕುಗಳಲ್ಲಿರುವ ಶಿಲ್ಕು **Balance with other Banks** | |
| 4,22,79,30,469.35 | ನಿರಖು ಠೇವಣಿಗಳು Fixed deposits | 4,70,46,56,357.90 | | | |
| 1,01,50,04,954.76 | ಉಳಿತಾಯ ಠೇವಣಿ Saving Deposits | 1,01,98,77,181.85 | 16,08,43,636.93 | ಚಾಲ್ತಿ ಖಾತೆಗಳು (Current Accounts) | 16,57,81,892.50 |
| | | | 37,45,99,900.87 | ನಿರಖು ಠೇವಣಿಗಳು (Fixed Deposits) | 67,51,99,900.87 |
| 7,79,27,710.32 | ಚಾಲ್ತಿ ಖಾತೆಗಳು Current Deposits | 5,49,57,139.67 | 1,00,00,000.00 | ಕರೆ ಹಣ (call money) | 0.00 |
| | | | 1,77,42,40,765.00 | ಹೂಡಿಕೆಗಳು SLR Investments | 1,82,42,40,765.00 |
| | | | 31,43,22,975.57 | ಹೂಡಿಕೆಗಳು Non SLR Investments | 26,30,21,850.62 |
| 89,83,12,724.30 | ಸುಸ್ತಿ ಸಾಲಗಳ ಬಡ್ಡಿ ಮೀಸಲು Overdue interest reserve | 1,08,61,69,026.73 | | ಸಾಲ – ಮುಂಗಡಗಳು **Loans & Advances** | |
| | | | 79,58,52,056.15 | ಅಲ್ಪಾವಧಿ ಸಾಲಗಳು Short term loans & Advances | 82,67,40,596.82 |
| 46,07,155.50 | ಸಾಲಗಳ ಇತರ ಶುಲ್ಕಗಳ ಮೀಸಲು Loan charges receivable A/c | 81,26,618.14 | | | |
| | | | 11,27,14,680.00 | ಮಧ್ಯಮಾವದಿ ಸಾಲಗಳು Medium Term Loans | 8,96,03,696.66 |
| | | | 2,37,70,48,752.50 | ದೀರ್ಘಾವಧಿ ಸಾಲಗಳು Long term Loans | 2,63,66,98,734.66 |

| | | | | | |
|---|---|---|---|---|---|
| | | | | ಬರತಕ್ಕ ಬಡ್ಡಿಗಳು **Interest receiveable** | |
| | | | 89,83,12,035.30 | ಸಾಲಗಳ ಮೇಲೆ ಬರತಕ್ಕ ಬಡ್ಡಿಗಳು Interest Receivable on loans | 1,08,61,69,026.73 |
| 1,05,02,423.00 | ಠೇವಣಿಗಳಿಗೆ ಬಡ್ಡಿ ಕಾದಿರಿಸಿದ್ದು Interest payable on Deposits | 32,83,665.00 | 46,07,155.50 | ಸಾಲಗಳ ಮೇಲೆ ಬರತಕ್ಕ ಇತರ ಖರ್ಚು Loan Other Charges Receivable | 81,26,618.14 |
| 4,83,38,390.06 | ಇತರ ಜವಾಬ್ದಾರಿಗಳು Other liabilities | 4,09,04,381.37 | 3,82,53,300.83 | ಪ್ರಮಾಣಿತ ಸಾಲಗಳ ಮೇಲೆ ಬರತಕ್ಕ ಬಡ್ಡಿಗಳು Interest Receivable standard | 3,80,00,622.03 |
| 8,27,40,082.39 | ಲಾಭ ಮತ್ತು ನಷ್ಟ ಖಾತೆ Profit and loss account | 10,38,81,587.02 | 3,15,17,959.70 | ಹೂಡಿಕೆಗಳ ಮೇಲೆ ಬರತಕ್ಕ ಬಡ್ಡಿಗಳು Interest Receivable on Investments | 3,26,40,233.99 |
| | | | 4,32,43,611.43 | ಸ್ಥಿರ ಹಾಗೂ ಚರ ಆಸ್ತಿಗಳು Fixed Asset | 16,56,12,006.94 |
| | | | 37,05,424.89 | ಅಂತರ ಶಾಖಾ ಹೊಂದಾಣಿಕೆಗಳು Inter branch adjustments | 21,80,993.92 |
| | | | 2,26,85,243.41 | ಇತರ ಆಸ್ತಿಗಳು Other assets | 2,67,11,091.10 |
| **7,02,26,48,514.30** | **ಒಟ್ಟು ಮೊತ್ತ** | **7,93,73,55,319.94** | **7,02,26,48,514.30** | **ಒಟ್ಟು ಮೊತ್ತ** | **7,93,73,55,319.94** |
| 46,16,393.00 | Contigent Liabilities | 46,95,870.00 | | | |

| | | | |
|---|---|---|---|
| ಸಹಿ/– | ಸಹಿ/– | ಸಹಿ/– | ಸಹಿ/– |
| **ಸುನಿಲ್ ಐ. ಮಿನೇಜಸ್** | **ಡಾ| ಜೆರಾಲ್ಡ್ ಪಿಂಟೊ** | **ಜೆರಾಲ್ಡ್ ಜೂಡ್ ಡಿ'ಸಿಲ್ವಾ** | **ಅನಿಲ್ ಲೋಬೊ** |
| ಪ್ರಭಾರ ಮಹಾಪ್ರಬಂಧಕರು | ನಿರ್ದೇಶಕರು | ಉಪಾಧ್ಯಕ್ಷರು | ಅಧ್ಯಕ್ಷರು |

ನಾನು ಮಂಗಳೂರು ಕಥೋಲಿಕ್ ಕೊ–ಅಪರೇಟಿವ್ ಬ್ಯಾಂಕ್ ನಿಯಮಿತ, ಮಂಗಳೂರು ಇದರ 2022–23ನೇ ಸಾಲಿನ ಲೆಕ್ಕ ಪರಿಶೋಧನೆಯನ್ನು ಮಾಡಿರುತ್ತೇನೆ. ನನ್ನ ತಿಳುವಳಿಕೆ ಹಾಗೂ ನಂಬಿಕೆಯ ಪ್ರಕಾರ ಲೆಕ್ಕ ಪರಿಶೋಧನೆಗೆ ಅಗತ್ಯವೆಂದು ಕಂಡುಬಂದ ಎಲ್ಲಾ ಮಾಹಿತಿ ಮತ್ತು ವಿವರಣೆಗಳನ್ನು ಪಡೆದಿದ್ದು ಅವುಗಳು ತೃಪ್ತಿಕರವೆಂದು ಕಂಡುಬಂದಿರುತ್ತದೆ. ನನ್ನ ಅಭಿಪ್ರಾಯ ಮತ್ತು ನಾನು ಪಡೆದಂತಹ ಮಾಹಿತಿ ಮತ್ತು ವಿವರಣೆಗಳಿಗನುಸಾರವಾಗಿ ಲಗ್ತೀಕರಿಸಿದ ನನ್ನ ನಿಖರವಾದ ಲೆಕ್ಕ ಪರಿಶೋಧನಾ ವರದಿಗೆ ಒಳಪಟ್ಟು ಬ್ಯಾಂಕಿನ ಲಾಭ–ನಷ್ಟದ ತ:ಖ್ತೆ ಹಾಗೂ ಆಸ್ತಿ ಹೊಣೆಗಾರಿಕೆ ತ:ಖ್ತೆಯು ದಿನಾಂಕ 31.03.2023ರಲ್ಲಿದ್ದಂತೆ ಬ್ಯಾಂಕಿನ ನೈಜ ಹಾಗೂ ಸಮಂಜಸ ಆರ್ಥಿಕ ಪರಿಸ್ಥಿತಿಯನ್ನು ಪ್ರತಿಬಿಂಬಿಸುತ್ತದೆ ಎಂದು ದೃಢೀಕರಿಸುತ್ತೇನೆ.

**ಲಿಲಾಧರ್ ಮತ್ತು ಕಂ.**
**ಚಾರ್ಟರ್ಡ್ ಅಕೌಂಟೆಂಟ್ಸ್ FRN : 001861S**
**ಇವರ ಪರವಾಗಿ**
**ಸಹಿ/–**
**(ಲಕ್ಷೀಶ ಎನ್. – ಪಾಲುದಾರ) Member No. 026873**
**UDIN: 23026873BGYGKF6391**

ಸ್ಥಳ: ಮಂಗಳೂರು
ದಿನಾಂಕ: 22–06–2023

# Notes on Accounts of balance sheet as on 31-03-2023

| Particulars | 31.03.2023 | 31.03.2022 |
|---|---|---|
| 1. Capital to Risk Weight Asset Ration (CRAR) | 21.54% | 15.35% |

2. Movement of CRAR (in lakhs)

| | | |
|---|---|---|
| Tier I Capital | 6774.77 | 4258.20 |
| Tier II Capital | 987.66 | 744.63 |
| Total Capital | 7762.43 | 5002.83 |
| Total Risk Weighted Assets | 36032.35 | 32589.68 |

3. Investments:

| | | |
|---|---|---|
| a. Book Value of Investments | 20872.63 | 20885.64 |
| b. Face Value of Investments | 21077.32 | 21090.33 |
| c. Market Value of Investments | 20985.93 | 21691.25 |

d. Details of issuer composition of non –SLR investments and non performing non SLR Investments

Issuer composition of non-SLR Investments

| No. | Issuer | Amount (in lakhs) | Extent of 'below investment grade securities' | Extent of 'Unrated Securities' | Extent of 'unlisted Securities' |
|---|---|---|---|---|---|
| 1 | PSUs | 0.00 | 0 | 0 | 0 |
| 2 | FIs | 0.30 | 0 | 0 | 0 |
| 3 | Public Sector Banks | 0.00 | 0 | 0 | 0 |
| 4 | Mutual Fund | 2629.87 | 0 | 0 | 0 |
| 5 | Others | 0 | 0 | 0 | 0 |
| 6 | Provision held towards depreciation | 11.78 | 0 | 0 | 0 |

**Non performing Non-SLR investments**

| Particulars | Amount (in lakhs) |
|---|---|
| Opening Balance | 0 |
| Additions during the year since 1st April | 0 |
| Reduction during the above period | 0 |
| Closing balance | 0 |
| Total provisions held | 0 |

4. **Advances against** (in lakhs)

| Particulars | 31.03.2023 | 31.03.2022 |
|---|---|---|
| Real Estate | 0.00 | 0.00 |
| Construction Business | 113.26 | 113.82 |
| Housing | 7069.77 | 6817.06 |

5. Advances against shares and debentures : 0

6. Advances to Director's, their relatives, Companies / Firms in which they are interested:

| | | |
|---|---|---|
| a. Fund Based | 0.95 | 1.95 |
| b. Non fund based | 0 | 0 |

| Particulars | 31.03.2023 | 31.03.2022 |
|---|---|---|
| 7. Cost of Deposits (average) | 5.25% | 5.70% |

8. NPAs (in lakhs)

| | | |
|---|---|---|
| a. Gross NPAs | 2193.86 | 2229.63 |
| b. Net NPA | 463.51 | 499.28 |

**9. Movement of NPAs, increase/(Decrease**) (in lakhs)

| | | |
|---|---|---|
| Gross NPAs | -35.77 | -55.09 |
| Net NPAs | -35.77 | -55.10 |

**10. Profitability**

| | | |
|---|---|---|
| a. Interest income as a percentage of working funds | 6.90% | 7.55% |
| b. Non-interest income as a percentage of working funds | 0.82% | 0.91% |
| c. Operating profit as a percentage of working funds | 2.04% | 2.28% |
| d. Return on Assets | 1.52% | 1.34% |
| e. Business (Deposits + Advances) per employee (in lakhs) | 888.81 | 860.65 |
| f. Profit per employee (in lakhs) | 9.89 | 8.27 |

**11. Provisions made towards**

(in lakhs)

| | | |
|---|---|---|
| NPAs | 1730.34 | 1730.34 |
| Depreciation in investments | 11.78 | 11.78 |
| Standard assets | 133.22 | 132.97 |

12. **Movement in provisions**: (increase/(decrease) (in lakhs)

| | | |
|---|---|---|
| NPAs | 0 | 0 |
| Depreciation in investments | 0 | 0 |
| Standard assets | 0.25 | 19.36 |

**13. Foreign Currency Assets & Liabilities (if applicable) : NIL**

| | | |
|---|---|---|
| 14. Payment of DICGC Insurance premium | 78.65 | 66.70 |
| Arrears | 0 | 0 |

Insurance premium has been paid up to date to DICGC, no arrears.

| | | |
|---|---|---|
| 15. Penalty imposed by RBI | NIL | 0 |
| 16. Restructured accounts | Nil | 1818.00 |
| 17. Provision for Restructured accounts | Nil | 181.80 |
| 17. Fixed Assets – Valuation / Revaluation | 1200.00 | 0 |

18. DEAF (Depositors' Education and Awareness Fund) 2014 Accounts: (in lakhs)

| | | |
|---|---|---|
| Opening balance of amounts transferred to DEAF | 46.16 | 45.84 |
| Add : Amount transferred to DEAF during the year | 0.80 | 0.32 |
| Less : Amount reimbursed by DEAF to claim | - | 0.00 |
| Closing balance of amounts transferred to DEAF | - | 0.00 |
| Closing balance of DEAF at RBI | 46.96 | 46.16 |
| Claims receivable | - | - |

ಕಾರ್ಯಸೂಚಿ–5

# ಮಂಗಳೂರು ಕಥೋಲಿಕ್ ಕೊ–ಅಪರೇಟಿವ್ ಬ್ಯಾಂಕ್
## 2022–23ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಗೆ ಆಡಳಿತ ಮಂಡಳಿಯ ಅನುಪಾಲನಾ ವರದಿ

1. ಮಹಾಪ್ರಬಂಧಕರು ದೃಡೀಕರಿಸಿದಂತೆ ಎಲ್ಲಾ ಠೇವಣಿಗಳ ಮೇಲೆ ಬಡ್ಡಿ ಕೊಟ್ಟಿದೆ ಹಾಗೂ ಕೊಡತಕ್ಕ ಬಡ್ಡಿಗೆ ರೂ.32,83,665.00 ಲೆಕ್ಕಚಾರ ಮಾಡಿ ಕಾಯ್ದಿರಿಸಲಾಗಿದೆ. ಈ ಬಗ್ಗೆ ಪ್ರತ್ಯೇಕ ಕುಳುವಾರು ಪಟ್ಟಿ ಲಭ್ಯವಿರುವುದಿಲ್ಲ.

   **ಅನುಪಾಲನ ವರದಿ :** ಪ್ರತ್ಯೇಕ ಕುಳುವಾರು ಪಟ್ಟಿ ಲಭ್ಯವಿರುತ್ತದೆ.

2. ಠೇವಣಿ ಖಾತೆಗಳ ನಿರ್ವಹಣೆ ಕುರಿತು ಆರ್.ಬಿ.ಐ. ಮಾಸ್ಟರ್ ಸುತ್ತೋಲೆ – ಪ್ರಾಥಮಿಕ (ನಗರ) ಸಹಕಾರಿ ಬ್ಯಾಂಕುಗಳು ಸಂಖ್ಯೆ (RB/2015–16–5DCBR,BPD(PCB), MCNo.6/13–01/00/2015–16) ಸ್ಪಷ್ಟವಾಗಿ ಹೀಗೆ ಹೇಳುತ್ತದೆ.: ಪ್ರಾಥಮಿಕ (ನಗರ) ಸಹಕಾರಿ ಬ್ಯಾಂಕುಗಳು ಅಸ್ತಿತ್ವದಲ್ಲಿರುವ ನಿವಾಸಿ, ಖಾತೆದಾರರು ಅನಿವಾಸಿಗಳಾದಾಗ ಅಂತಹ ಖಾತೆಗಳನ್ನು ಮರುವರ್ಗೀಕರಣ ಮಾಡಿ ಅನಿವಾಸಿ ಸಾಮಾನ್ಯ (NRO) ಖಾತೆಗಳಾಗಿ ಪರಿವರ್ತಿಸಿದ್ದಲ್ಲಿ ಅಂತಹ ಖಾತೆಗಳಿಗೆ ಮಾತ್ರ ನಿಯತಕಾಲಿಕ ಬಡ್ಡಿಯನ್ನು ನೀಡಲು ಅನುಮತಿ ನೀಡಲಾಗಿರುತ್ತದೆ. ಪ್ರಾಥಮಿಕ (ನಗರ) ಸಹಕಾರಿ ಬ್ಯಾಂಕುಗಳಿಗೆ ಅನಿವಾಸಿ ಸಾಮಾನ ಕಾರ್ಯಾಚರಣೆ (NRO) ಖಾತೆಗಳನ್ನು ತೆರೆಯಲು (ವರ್ಗ ಎ ಅಧಿಕೃತ ವಿತರಕರನ್ನು ಹೊರತುಪಡಿಸಿ) ನಿಷೇದಿಸಿದೆ. ಆದಾಗ್ಯೂ ವರದಿ ಸಾಲಿನಲ್ಲಿ ಬ್ಯಾಂಕು ಯಾವುದೇ (NRO) ಖಾತೆಗಳನ್ನು ತೆರೆಯದಿದ್ದರೂ ಅದು ಹಿಂದಿನ ವರ್ಷಗಳಲ್ಲಿ ತೆರೆದಂತಹ ಖಾತೆಗಳನ್ನು ಮುಂದುವರಿಸಿದೆ. ಇದು ಆರ್.ಬಿ.ಐ. ಮಾರ್ಗಸೂಚಿಗಳನ್ನು ಉಲ್ಲಂಘಿಸಿದಂತೆ ಆಗುತ್ತದೆ.

   **ಅನುಪಾಲನ ವರದಿ :** ಬ್ಯಾಂಕಿನಲ್ಲಿ ಹತ್ತು ವರ್ಷಗಳ ಹಿಂದಿನ ನಿಷ್ಕ್ರಿಯ ಎನ್ಆರ್ಓ ಖಾತೆಗಳಾಗಿದ್ದು, ಸದ್ರಿ ಖಾತೆಗಳನ್ನು ಮುಕ್ತಾಯಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

3. ಸಾಲಗಳ ಸ್ವಾಸ್ತ್ಯದ ಸಂಹಿತೆಯ ನಿಗದಿಪಡಿಸುವಿಕೆಯ ಬಗ್ಗೆ ನಿಯಮಗಳನ್ನು ರೂಪಿಸಿಕೊಂಡಿರುವುದಿಲ್ಲ. ಇದನ್ನು ಗಣಕೀಕರಣಗೊಳಿಸಲು ಸೂಚಿಸಲಾಗಿದೆ.

   **ಅನುಪಾಲನ ವರದಿ :** ಆರ್‌ಬಿಐ ಸುತ್ತೋಲೆ UBD.BPD.(PCB)MC No.3/09.14.000/2011–12 ದಿನಾಂಕ 01.07.2011ರ ಪ್ರಕಾರ ಭಾರತೀಯ ರಿಸರ್ವ್ ಬ್ಯಾಂಕ್ ಪಟ್ಟಣ ಸಹಕಾರಿ ಬ್ಯಾಂಕ್‌ಗಳಿಗೆ IRAC norms (Income Recognition, Asset Classification) ಅಳವಡಿಸಿ, ಸಾಲಗಳ ಸ್ವಾಸ್ತ್ಯದ ಸಂಹಿತೆ ನಿಗದಿಪಡಿಸುವುದನ್ನು ಸ್ಥಗಿತಕೊಳಿಸಲಾಗಿದೆ. ನಾವು ಈಗ IRAC norms ನಿಯಮಗಳನ್ನು ಪಾಲಿಸುತ್ತಿದ್ದೇವೆ.

4. ಸಾಲ ನವೀಕರಿಸುವ ಸಂದರ್ಭದಲ್ಲಿ ಲೆಕ್ಕ ಪರಿಶೋಧಿತ ಹಣಕಾಸು ತ:ಖ್ತೆಗಳನ್ನು ಪಡೆಯುವ ಬಗ್ಗೆ ಸೂಚಿಸಲಾಗಿದೆ.
   **ಅನುಪಾಲನ ವರದಿ :** ಈ ಬಗ್ಗೆ ಶಾಖೆಗಳಿಗೆ ಈಗಾಗಲೇ ಸೂಕ್ತ ನಿರ್ದೇಶನ ನೀಡಲಾಗಿದೆ.

5. ಸಾಲ ವಿತರಿಸುವ ಸಂಧರ್ಭದಲ್ಲಿ ಯೋಜನೆ ವರದಿಯನ್ನು (ಪ್ರೊಜೆಕ್ಟ್‌ರಿಪೋರ್ಟ್) ಕೂಲಂಕುಷವಾಗಿ ಪರಿಶೀಲಿಸಬೇಕು. ಯೋಜನೆಯ ವೆಚ್ಚವು ಪಡೆದ ಅಂದಾಜು, ಉಲ್ಲೇಖ, ಕಾರ್ಯಸಾಧ್ಯತಾ ಅಧ್ಯಯನ, ಅನುಪಾತಗಳು ಮತ್ತು ಬ್ಯಾಂಕಿನೊಂದಿಗೆ ಅಸ್ತಿತ್ವದಲ್ಲಿ ಇರುವ ಸಾಲ ಸೌಲಭ್ಯಗಳು ಮತ್ತು ವ್ಯವಹಾರ ಯೋಜನೆಗಳ ಬಗ್ಗೆ ವಿಶೇಷ ಗಮನ ನೀಡಬೇಕಾಗಿದೆ. ಯೋಜನೆಯ ಅಂದಾಜು ವೆಚ್ಚ, ಹಣಕಾಸಿನ ಪ್ರಕ್ಷೇಪಗಳಲ್ಲಿ ಒದಗಿಸಿದ ತಂತ್ರಾಂಶವು ಕೇವಲ ಹಣಕಾಸಿನ ಹಾಗೂ ಪ್ರಾಯೋಗಿಕ ಊಹೆಗಳ ಆಧಾರದ ಮೇಲೆ ಇರುವುದು. ಯೋಜನೆಯ ವರದಿ ವಾಸ್ತವಕ್ಕೆ ಹತ್ತಿರದಲ್ಲಿ ಇದೆಯೇ ಎಂದು ಪರಿಶೀಲಿಸುವ ಕ್ರಮ ಅಳವಡಿಸಿಕೊಳ್ಳುವುದು.

   **ಅನುಪಾಲನ ವರದಿ :** ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ.

6. ಸಾಲದ ವಿತರಣೆಯ ಅಂತಿಮ ಬಳಕೆಯನ್ನು (End use), ಸರಕುಪಟ್ಟಿಗಳ (Invoice) ಪ್ರತಿಗಳನ್ನು ಅಥವಾ ಪಾವತಿಗಳ ಪುರಾವೆಗಳನ್ನು ಪಡೆದುಕೊಳ್ಳುವ ಮೂಲಕ ಖಚಿತಪಡಿಸಿಕೊಳ್ಳಬೇಕು. ದುಡಿಯುವ ಬಂಡವಾಳದ ಅಗತ್ಯಗಳಿಗೆ ಅನುಕೂಲವಾಗುವಂತೆ ನೀಡಲಾದ ಸಾಲಗಳ ಸಂದರ್ಭಗಳಲ್ಲಿ, ಪಾವತಿ ಮಾಡಿದ ಪುರಾವೆಗಳನ್ನು ಪಡೆದುಕೊಳ್ಳುವ ಮೂಲಕ ಅಂತಿಮ ಬಳಕೆಯನ್ನು ಖಚಿತಪಡಿಸಿಕೊಳ್ಳುವ ಕ್ರಮ ಅಳವಡಿಸಿಕೊಳ್ಳುವುದು.

   **ಅನುಪಾಲನ ವರದಿ :** ಈ ಬಗ್ಗೆ ಶಾಖಾ ವ್ಯವಸ್ಥಾಪಕರಿಗೆ ಸೂಕ್ತ ನಿರ್ದೇಶನಗಳನ್ನು ನೀಡಲಾಗಿದೆ.

7. ಗೃಹ ಸಾಲಗಳನ್ನು ಹೊರತುಪಡಿಸಿ ಇತರ ಸಾಲಗಳಲ್ಲಿ ಸಾಲದ ಮೊತ್ತವನ್ನು ವಿತರಿಸಿದ ಬಳಿಕ ಬಿಲ್ಲುಗಳನ್ನು ಪಡೆಯಲು ಕ್ರಮ ಇಡುವುದು. ದೊಡ್ಡ ಮೊತ್ತದ ಸಾಲಗಳ ಸಂದರ್ಭಗಳಲ್ಲಿ ಪ್ರಗತಿ ವರದಿಗಳನ್ನು ಸ್ವತಂತ್ರ ಮೌಲ್ಯಮಾಪಕರಿಂದ ಪರಿಶೀಲನೆ ಮಾಡಲು ಕ್ರಮ ಅಳವಡಿಸಿಕೊಳ್ಳುವುದು. ಗೃಹ ಸಾಲಗಳಲ್ಲಿ ಪುರಸಭೆ/ಪಂಚಾಯತ್ ಪ್ರಾಧಿಕಾರದಿಂದ ಅಥವಾ ಸ್ವತಂತ್ರ ಮೌಲ್ಯಮಾಪಕರಿಂದ ಪೂರ್ಣಗೊಂಡ ವರದಿಯನ್ನು ಪಡೆಯಲು ಕ್ರಮ ಇಡುವುದು.

**ಅನುಪಾಲನ ವರದಿ :** ಈ ಬಗ್ಗೆ ಕ್ರಮ ಕೈಗೊಳ್ಳಲಾಗುವುದು.

8. ಅನುತ್ಪಾದಕ ಸಾಲದ ದಾಖಲೆ ಪತ್ರಗಳ ಸುರಕ್ಷತೆಗೆ ಹೆಚ್ಚಿನ ಗಮನ ನೀಡಬೇಕು.

**ಅನುಪಾಲನ ವರದಿ :** ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ.

9. ಅನುತ್ಪಾದಕ ಸಾಲಗಳಿಗೆ ಕಲ್ಪಿಸುವ ಅವಕಾಶವು ಸಾಲಕ್ಕೆ ನೀಡಿರುವ ಭದ್ರತೆಯ ಮೌಲ್ಯದ ಮೇಲೆ ಅವಲಂಬಿಸಿರುವುದು. ಅದುದರಿಂದ ಭದ್ರತೆಯ ಮೌಲ್ಯಮಾಪನ ಕಡ್ಡಾಯವಾಗಿ 3 ವರ್ಷಕ್ಕೊಮ್ಮೆ ಮಾಡುವಂತೆ ಕ್ರಮ ಇಡುವುದು.

**ಅನುಪಾಲನ ವರದಿ :** ಈ ಬಗ್ಗೆ ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ.

10. ಚಿನ್ನಾಭರಣ ಅಧರಿತ ಸಾಲ, ಠೇವಣಿ ಅಧರಿತ ಸಾಲ ಹಾಗೂ ನಗದು ಪತ್ತಿನ ಸಾಲ, ಇವುಗಳನ್ನು ಹೊರತುಪಡಿಸಿ, ಉಳಿದ ಸಾಲಗಳನ್ನು ವರ್ಷಂಪ್ರತಿ ಅವರಿಂದ ಲೆಕ್ಕ ಪರಿಶೋಧಿತ ಹಣಕಾಸು ತ:ಖ್ತೆಯನ್ನು ಕಡ್ಡಾಯವಾಗಿ ಪಡೆದು ಪುನರಾವಲೋಕನ (Review) ಮಾಡಿಕೊಳ್ಳುವುದು.

**ಅನುಪಾಲನ ವರದಿ :** ಈ ಬಗ್ಗೆ ಶಾಖೆಗಳಿಗೆ ಈಗಾಗಲೇ ಸೂಕ್ತ ನಿರ್ದೇಶನ ನೀಡಲಾಗಿದೆ.

11. ನೋಂದಾಯಿತ ಕಂಪೆನಿಗಳಿಗೆ ಮತ್ತು ಸೀಮಿತ ಲಯಬಿಲಿಟಿ ಪಾಲುದಾರಿಕೆಗಳಿಗೆ (LLP) ಸಾಲ ನೀಡುವ ಸಂದರ್ಭದಲ್ಲಿ ನಿರ್ದೇಶಕ ಯಾ ಪಾಲುದಾರರ ಆಸ್ತಿಗಳನ್ನು ಅಡವು ಮಾಡಲಾಗುತ್ತಿದ್ದು, ಕಂಪೆನಿಯ ಮೆಮೋರಾಂಡಮ್ ಅಫ್ ಎಸೋಸಿಯನ್ ಮತ್ತು ಆರ್ಟಿಕಲ್ಸ್ ಅಫ್ ಎಸೋಸಿಯೇಶನ್ ಅಥವಾ ಪಾಲುದಾರಿಕೆ ಕರಾರುಗಳಲ್ಲಿ ಇಂತಹ ಅಡಮಾನಕ್ಕೆ ಎರವಲು ಅಧಿಕಾರಗಳು ಅನುಮತಿ ನೀಡುವ ಕುರಿತು ಕೂಲಂಕುಶವಾಗಿ ಪರಿಶೀಲಿಸಿ ಅಥವಾ ಕಾನೂನು ತಜ್ಞರ ಅಭಿಪ್ರಾಯಗಳನ್ನು ಪಡೆಯುವುದು.

**ಅನುಪಾಲನ ವರದಿ:** ಈ ಬಗ್ಗೆ ಪರಿಶೀಲಿಸಿ ಸಾಲ ನೀಡಲಾಗುವುದು.

12. ಕರ್ನಾಟಕ ಸಹಕಾರಿ ಸಂಘಗಳ ಕಾಯ್ದೆ 1959 ಕಲಂ 16(4) ಪ್ರಕಾರ ಸದಸ್ಯತ್ವವನ್ನು ಕೋರಿ ಬಂದ ಅರ್ಜಿಯ ದಿನಾಂಕದಿಂದ ಮೂರು ತಿಂಗಳೊಳಗಾಗಿ ಅಂಗೀಕಾರ ಅಥವಾ ತಿರಸ್ಕರಿಸಲ್ಪಟ್ಟಿರುವುದನ್ನು ಅರ್ಜಿದಾರನಿಗೆ ತಿಳಿಸದೇ ಇದ್ದ ಪಕ್ಷದಲ್ಲಿ ಸದಸ್ಯತ್ವವನ್ನು ಕಲಂ 1054 ಉದ್ದೇಶಕ್ಕಾಗಿ ಈ ಅವಧಿಯ ಕೊನೆಯ ದಿನಾಂಕದಿಂದ ತಿರಸ್ಕರಿಸಲ್ಪಟ್ಟಿದೆ ಎಂದು ಭಾವಿಸತಕ್ಕದ್ದು. ಆದರೆ ಬ್ಯಾಂಕ್ ಹಿಂದಿನ ವರ್ಷಗಳಲ್ಲಿ ಹಲವು ಅರ್ಜಿಗಳನ್ನು ಪಡೆದು ಅವುಗಳನ್ನು ಅಂಗೀಕಾರ ಅಥವಾ ತಿರಸ್ಕರಿಸದೆ ರೂ.3,46,255.00ರಷ್ಟು ಷೇರು ಸಸ್ಪೆನ್ಸ್ ಖಾತೆಯಲ್ಲಿ ಇರಿಸಿದೆ. ಇದು ಕಾಯ್ದೆ ಹಾಗೂ ಉಪನಿಯಮಗಳ ಉಲ್ಲಂಘನೆ ಆಗಿರುತ್ತದೆ.

**ಅನುಪಾಲನ ವರದಿ :** ಷೇರು ಸಸ್ಪೆನ್ಸ್ ಖಾತೆಯಲ್ಲಿ ಇರುವ ಮೊತ್ತವು ಸದಸ್ಯರು ಸಾಲವನ್ನು ಕೋರಿ ಸಲ್ಲಿಸಿದ ಅರ್ಜಿಗೆ ಶೇರು ಜೊಡನೆ ಮೊತ್ತವಾಗಿದ್ದು ಸದ್ರಿ ಮೊತ್ತವನ್ನು ಸಾಲವನ್ನು ಪಡೆದ ಸದಸ್ಯರ ಖಾತೆಗೆ ಎಪ್ರಿಲ್ ತಿಂಗಳಲ್ಲಿ ಹೊಂದಾಣಿಕೆ ಮಾಡಲಾಗಿದೆ.

13. ಸಸ್ಪೆನ್ಸ್ ಖಾತೆಗಳಲ್ಲಿ ಹಲವಾರು ವರ್ಷಗಳಿಂದ ಮೊತ್ತವು ಬಾಕಿ ಇರುತ್ತದೆ. ಇವುಗಳನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳುವುದು.

**ಅನುಪಾಲನ ವರದಿ:** ಈ ಬಗ್ಗೆ ಶೀಘ್ರ ಕ್ರಮ ಕೈಗೊಳ್ಳಲಾಗುವುದು.

14. ತಂತ್ರಜ್ಞಾನ ಪರಿಶೋಧನೆಯಲ್ಲಿ ಪಟ್ಟಿ ಮಾಡಿರುವ ನ್ಯೂನತೆಗಳನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡಲು ಶೀಘ್ರವಾಗಿ ಕ್ರಮ ಕೈಗೊಳ್ಳುವುದು.

**ಅನುಪಾಲನ ವರದಿ :** ಈಗಾಗಲೇ ಸಿಬಿಸ್ ತಂತ್ರಜ್ಞಾನವನ್ನು ಉನ್ನತ ಮಟ್ಟಗೇರಿಸಿದ್ದು, ಶ್ರೀಘ್ರದಲ್ಲಿ ತಂತ್ರಜ್ಞಾನ ಪರಿಶೋಧನೆ ಮಾಡಿ ನ್ಯೂನತೆಗಳನ್ನು ಸರಿಪಡಿಸಲು ಕ್ರಮ ಕೈಗೊಳ್ಳಲಾಗುವುದು.

ಮಹಾಪ್ರಬಂಧಕರು (ಪ್ರ)

**ಕಾರ್ಯಸೂಚಿ–9**

## 2023–24ನೇ ಸಾಲಿಗೆ ಶಾಸನಬದ್ಧ ಲೆಕ್ಕಪರಿಶೋಧಕರ ನೇಮಕಾತಿಯ ಅನುಮೋದನೆ.

ಭಾರತೀಯ ರಿಸರ್ವ್ ಬ್ಯಾಂಕಿನ ಸುತ್ತೋಲೆ BLR.DCBS.ADM.No.S215/07.02.310/2021-22 ದಿನಾಂಕ 25.10.2021ರಂತೆ ಮೆ| ಲೀಲಾಧರ್ ಅಂಡ್ ಕಂಪೆನಿ, ಚಾರ್ಟರ್ಡ್ ಅಕೌಂಟೆಂಟ್ಸ್, ಮಂಗಳೂರು ಇವರ ಹೆಸರನ್ನು ಲೆಕ್ಕಪರಿಶೋಧನೆಗಾಗಿ ಭಾರತೀಯ ರಿಸರ್ವ್ ಬ್ಯಾಂಕಿನ ಅನುಮತಿಗಾಗಿ ಕಳುಹಿಸಲಾಗಿದೆ. ಸಹಕಾರ ಸಂಘಗಳ ಕಾಯ್ದೆ 1959 ಕಲಂ 63ರ ಪ್ರಕಾರ ಸಂಭಾವನೆಯನ್ನು ನಿಗದಿಪಡಿಸಬಹುದಾಗಿದೆ.

**ಕಾರ್ಯಸೂಚಿ–6**

# ಮಂಗಳೂರು ಕಥೋಲಿಕ್ ಕೊ–ಅಪರೇಟಿವ್ ಬ್ಯಾಂಕ್
# 2023–24ನೇ ವರ್ಷದ ಕಾರ್ಯಕ್ರಮ

1. ಸದಸ್ಯರು ರೂ. 10.39 ಕೋಟಿ ವರೆಗೆ ಭದ್ರತಾ ಸಾಲಗಳನ್ನು ಅಥವಾ ನಿಗದಿತ ಮಿತಿಯೊಳಗೆ ಹೆಚ್ಚುವರಿ ಭದ್ರತಾ ಸಾಲಗಳನ್ನು ಅವಶ್ಯಕತೆಗಳಿಗನುಗುಣವಾಗಿ ಪಡೆಯಬಹುದು.
2. ಆಭರಣ ಸಾಲವನ್ನು ಸದಸ್ಯರಿಗೆ ರೂ. 50.00 ಲಕ್ಷದವರೆಗೆ ನೀಡಲಾಗುವುದು.
3. ಸದಸ್ಯರ ಮಕ್ಕಳ ಉನ್ನತ ವ್ಯಾಸಂಗಕ್ಕಾಗಿ ಶೇಕಡಾ 8.75ರ ಬಡ್ಡಿ ದರದಲ್ಲಿ ಸಾಲವನ್ನು ನೀಡಲಾಗುವ ಯೋಜನೆಯನ್ನು ಮುಂದುವರಿಸಲಾಗುವುದು.
4. ಸದಸ್ಯರಿಗೆ ಹೊಸ ವಾಹನಗಳನ್ನು ಖರೀದಿಸಲು ವಾಹನ ಸಾಲವನ್ನು ಖರೀದಿ ಕ್ರಯದ ಶೇಕಡಾ 85ರಷ್ಟು ನೀಡಲಾಗುವುದು. ಸಾಲ ಮರುಪಾವತಿ ಮಾಡಲು ಗರಿಷ್ಠ 84 ತಿಂಗಳ ಕಾಲಾವಧಿಯನ್ನು ನೀಡಲಾಗುತ್ತದೆ.
5. ಮನೆ ಕಟ್ಟಡ ನಿರ್ಮಾಣ ಹಾಗೂ ಖರೀದಿಗೆ ಆಕರ್ಷಕ ಬಡ್ಡಿ ದರದಲ್ಲಿ ಸಾಲ ಮರುಪಾವತಿ ಮಾಡಲು ಗರಿಷ್ಠ 20 ವರ್ಷಗಳ ಕಾಲಾವಧಿಯನ್ನು ನೀಡಲಾಗುವುದು.
6. ರೇವಣಿ ಸಂಗ್ರಹಣೆ ಹಾಗೂ ಸಾಲ ನಿರ್ವಹಣೆಗಳೊಂದಿಗೆ ಬ್ಯಾಂಕಿನ ಸೇವೆಗಳ ಕುರಿತು ಬ್ಯಾಂಕಿನ ಸಿಬ್ಬಂದಿಗಳಿಗೆ ಹಂತ ಹಂತವಾಗಿ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದು
7. ಬ್ಯಾಂಕಿನ ಆಡಳಿತ ಕಛೇರಿಗೆ ಹೊಸ ರೂಪವನ್ನು ನೀಡುವುದು.
8. ಯುಪಿಐ, ಗೂಗಲ್ ಪೇ ಅಂತಹ ಡಿಜಿಟಲ್ ಸೇವೆಯನ್ನು ಪ್ರಾರಂಭಿಸುವುದು.
9. ಗ್ರಾಹಕರ ಸಮಾವೇಶವನ್ನು ನಡೆಸುವುದು.
10. ಬ್ಯಾಂಕಿನ ಶಾಖೆಗಳನ್ನು ಹೆಚ್ಚಿಸುವುದು
11. ಬ್ಯಾಂಕಿನ ಶಾಖೆಗಳಿಗೆ ಸ್ವಂತ ಕಟ್ಟಡ ಖರೀದಿಸುವುದು.
12. ಗ್ರಾಹಕರ ಅನುಕೂಲತೆಗಾಗಿ ಶಾಖೆಗಳ ಸ್ಥಳಾಂತರ ಮಾಡುವುದು.

(ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ)

ಮಂಗಳೂರು
11.08.2023 **ಮಹಾಪ್ರಬಂಧಕರು (ಪ್ರ)**

**ಕಾರ್ಯಸೂಚಿ–7**

## ಬಜೆಟಿನ ಮಿತಿಗಿಂತ ಮೀರಿದ ವೆಚ್ಚಗಳ ಮಂಜೂರಾತಿ

| | | ಅಂದಾಜು ರೂ. ಪೈ. | ವ್ಯಯವಾದದ್ದು ರೂ. ಪೈ. | ಹೆಚ್ಚುವರಿ ರೂ. ಪೈ. |
|---|---|---|---|---|
| 1 | ಕಾನೂನು ವೆಚ್ಚ | 10,00,000.00 | 11,79,550.00 | 1,79,550.00 |
| 2 | ದುರಸ್ತಿ, ನಿರ್ವಹಣೆ ಮತ್ತು ಸವಕಳಿ | 1,45,00,000.00 | 1,60,06,228.43 | 15,06,228.43 |
| 3 | ಲೇಖನ ಸಾಮಗ್ರಿ ಮತ್ತು ಮುದ್ರಣ ವೆಚ್ಚ | 16,00,000.00 | 28,56,351.26 | 12,56,351.26 |
| 4 | ಜಾಹೀರಾತು ವೆಚ್ಚ | 25,00,000.00 | 25,61,513.58 | 61,513.58 |
| 5 | ಸಾದಿಲ್ವಾರು ವೆಚ್ಚ | 85,00,000.00 | 1,32,62,649.95 | 47,62,649.95 |
| 6 | ಸಹಕಾರ ನಿಧಿ ಕಮಿಷನ್ | 42,00,000.00 | 48,67,592.00 | 6,67,592.00 |

(ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ)

11.08.2023 **ಮಹಾಪ್ರಬಂಧಕರು (ಪ್ರ)**

**ಕಾರ್ಯಸೂಚಿ–8**

# ಮಂಗಳೂರು ಕಥೋಲಿಕ್ ಕೊ–ಅಪರೇಟಿವ್ ಬ್ಯಾಂಕ್
## 2023–24ನೇ ಸಾಲಿನ ವಾರ್ಷಿಕ ಅಂದಾಜು ಆಯವ್ಯಯ ಪಟ್ಟಿ

| ಕ್ರ. ಸಂ. | ಅದಾಯ | 2022–23ನೇ ವರ್ಷದ ನೈಜ ಖರ್ಚು | 2023–24ನೇ ವರ್ಷಕ್ಕೆ ಅಂದಾಜು ಅಯವ್ಯಯ |
|---|---|---|---|
| 1 | ಬಡ್ಡಿ ಜಮಾ | 50,77,40,535.03 | 58,00,00,000.00 |
| 2 | ರುಸುಮು ಮತ್ತು ದಲ್ಲಾಳಿ ಶುಲ್ಕ | 10,31,433.24 | 11,00,000.00 |
| 3 | ಇತರ ಜಮೆಗಳು | 1,92,50,915.31 | 2,50,00,000.00 |
| | **ಒಟ್ಟು** | **52,80,22,883.58** | **60,61,00,000.00** |
| | **ಖರ್ಚು** | | |
| 1 | ಠೇವಣಿ ಮತ್ತು ಪಡೆದ ಸಾಲಗಳ ಮೇಲಿನ ಬಡ್ಡಿ | 28,08,66,220.88 | 31,00,00,000.00 |
| 2 | ಸಂಬಳ ಮತ್ತು ಭತ್ಯೆ | 5,75,30,335.52 | 7,00,00,000.00 |
| 3 | ನಿರ್ದೇಶಕರ, ಸ್ಥಳೀ೦ಯ ಸಮಿತಿ ಸದಸ್ಯರ ಪೀಸು–ಭತ್ಯೆ | 8,83,706.90 | 13,00,000.00 |
| 4 | ಬಾಡಿಗೆ, ತೆರಿಗೆ, ವಿಮಾ ಕಂತು, ವಿದ್ಯುಚ್ಛಕ್ತಿ, | 1,83,10,353.11 | 1,95,00,000.00 |
| 5 | ಕಾನೂನು ಖರ್ಚು | 11,79,550.00 | 10,00,000.00 |
| 6 | ಅಂಚೆ, ತಂತಿ ಮತ್ತು ದೂರವಾಣಿ | 23,79,735.22 | 28,00,000.00 |
| 7 | ಸವಕಳಿ ಮತ್ತು ರಿಪೇರಿ | 1,60,06,228.43 | 3,00,00,000.00 |
| 8 | ಲೇಖನ ಸಾಮಗ್ರಿ ಮತ್ತು ಮುದ್ರಣ ಖರ್ಚು | 28,56,351.26 | 30,00,000.00 |
| 9 | ಲೆಕ್ಕ ಪರಿಶೋಧನೆ | 6,39,050.00 | 6,50,000.00 |
| 10 | ಜಾಹಿರಾತು ಖರ್ಚು | 25,61,513.58 | 26,00,000.00 |
| 11 | ಸಾದಿಲ್ವಾರು ಖರ್ಚು | 1,32,62,649.95 | 1,25,00,000.00 |
| 12 | ಮಹಾಸಭೆಯ ಖರ್ಚು/ಚುನಾವಣಾ ವೆಚ್ಚ | 7,39,945.86 | 15,00,000.00 |
| 13 | ಸಹಕಾರಿ ನಿಧಿ ಏಜಂಟ್ ಕಮಿಷನ್ | 48,67,592.00 | 45,00,000.00 |
| 14 | ಹೂಡಿಕೆಗಳ ಮೇಲಿನ ಪ್ರಿಮೀಯಮ್ | 0.00 | 2,00,000.00 |
| 15 | ಬ್ಯಾಂಕೇತರ ಆಸ್ತಿಗಳಿಂದ ಆದ ನಷ್ಟ | 79,841.11 | 0.00 |
| 16 | ಕಾಯಿದೆ ಅನ್ವಯ ಲೆಕ್ಕ ಪರಿಶೋಧನೆ ಬಗ್ಗೆ | 5,21,560.00 | 5,21,560.00 |
| 17 | ಕಾಯ್ದಿರಿಸಿದ ಹಾಗೂ ತೆರಿಗೆ ಮೊದಲಿನ ಲಾಭ | 12,53,38,249.76 | 14,60,28,440.00 |
| | **ಒಟ್ಟು** | **52,80,22,883.58** | **60,61,00,000.00** |

(ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ)

ಮಂಗಳೂರು

11.08.2023

**ಮಹಾಪ್ರಬಂಧಕರು (ಪ್ರ)**

## ಸದಸ್ಯರ ಗಮನಕ್ಕೆ

**ಬ್ಯಾಂಕಿನ ಉಪ ವಿಧಿ ಸಂಖ್ಯೆ 47(5)ರಂತೆ ಈ ಕೆಳಕಂಡ ಸದಸ್ಯರಿಗೆ ಬ್ಯಾಂಕಿನ ಸಾಮಾನ್ಯ ಸಭೆಯಲ್ಲಿ/ಚುನಾವಣೆಯಲ್ಲಿ ಮತ ಚಲಾಯಿಸುವ ಹಕ್ಕಿರುವುದಿಲ್ಲ;**

**(ಇ) ಕಳೆದ 5 ಸಾಮಾನ್ಯ ಸಭೆಗಳ ಪೈಕಿ ಎರಡು ಸಾಮಾನ್ಯ ಸಭೆಗಳಿಗೆ ಹಾಜರಾಗಲು ತಪ್ಪುವ ಸದಸ್ಯರಿಗೆ ಒಂದು ವರ್ಷಗಳವರೆಗೆ ಮತ ಚಲಾಯಿಸುವ ಹಕ್ಕು ಇರುವುದಿಲ್ಲ.**

**(ಎಫ್) ಹಿಂದಿನ ಐದು ಸಹಕಾರ ವರ್ಷಗಳ ಪೈಕಿ ಯಾವುದೇ ಎರಡು ಸಹಕಾರ ವರ್ಷಗಳಲ್ಲಿ ಬ್ಯಾಂಕಿನ ಉಪವಿಧಿಗಳಲ್ಲಿ ಬ್ಯಾಂಕಿನ ಉಪವಿಧಿ ಸಂ.20ರಲ್ಲಿ ನಿರ್ದಿಷ್ಟಪಡಿಸಿದ ಕನಿಷ್ಠ ಸೇವೆಗಳನ್ನು ಅಥವಾ ಸೌಲಭ್ಯಗಳನ್ನು ಬಳಸಿಕೊಳ್ಳಲು ತಪ್ಪಿದ ಸದಸ್ಯರಿಗೆ ಒಂದು ವರ್ಷದ ಅವಧಿಗೆ ಮತ ಚಲಾಯಿಸುವ ಹಕ್ಕು ಇರುವುದಿಲ್ಲ.**

**ಕಾರ್ಯಸೂಚಿ–9**

# ಮಂಗಳೂರು ಕಥೋಲಿಕ್ ಕೊ–ಅಪರೇಟಿವ್ ಬ್ಯಾಂಕ್

## 2022–23ನೇ ಸಾಲಿನ ನಿವ್ವಳ ಲಾಭದ ವಿಂಗಡಣೆ

| | | | |
|---|---|---|---|
| | **ನಿವ್ವಳ ಲಾಭ** | | **10,38,81,587.02** |
| 1. | ಮೀಸಲು ನಿಧಿ | 25% | 2,59,70,396.76 |
| 2. | ಸಹಕಾರಿ ಶಿಕ್ಷಣ ನಿಧಿ | 3% | 23,37,335.71 |
| 3. | ಕಟ್ಟಡ ನಿಧಿ | 13% | 1,00,27,170.19 |
| 4. | ಧರ್ಮಾರ್ಥ ದತ್ತ ನಿಧಿ (Charity Fund) | 8% | 53,68,392.65 |
| 5. | ಸಿಬ್ಬಂದಿ ಕ್ಷೇಮ ನಿಧಿ | 0.5% | 3,08,682.58 |
| 6. | ಡಿವಿಡೆಂಟ್ | 10% | 1,90,60,228.00 |
| 7. | Special Reserve under Section 36(1)(viii) of Income Tax Act | | 85,31,670.00 |
| 8. | Investment Fluctuation Reserve | | 20,00,000.00 |
| 9. | ಹಂಚಿ ಉಳಿದ ಮೊತ್ತ ಮೀಸಲು ನಿಧಿಗೆ | | 3,02,77,711.14 |
| | ಒಟ್ಟು | | **10,38,81,587.02** |

(ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ)

11.08.2023 **ಮಹಾಪ್ರಬಂಧಕರು (ಪ್ರ)**

**ಕಾರ್ಯಸೂಚಿ–11**

## ಬ್ಯಾಂಕಿಗೆ ಸದಸ್ಯರನ್ನು ಸೇರಿಸಿಕೊಂಡ ಮತ್ತು ಸದಸ್ಯತ್ವದಿಂದ ಸಮಾಪನೆ ಮಾಡಿರುವ ಬಗ್ಗೆ

| | |
|---|---|
| ದಿನಾಂಕ 31.03.2022ಕ್ಕೆ ಇದ್ದಂತೆ ಸದಸ್ಯರ ಸಂಖ್ಯೆ | 28127 |
| 2022–23ನೇ ಸಾಲಿನಲ್ಲಿ ಬ್ಯಾಂಕಿಗೆ ಸೇರಿಸಿಕೊಂಡ ಸದಸ್ಯರ ಸಂಖ್ಯೆ | 1374 |
| 2022–23ನೇ ಸಾಲಿನಲ್ಲಿ ಸಮಾಪನೆ ಮಾಡಿರುವ ಸದಸ್ಯರ ಸಂಖ್ಯೆ | 557 |
| ದಿನಾಂಕ 31.03.2023 ಕ್ಕೆ ಇದ್ದಂತೆ ಸದಸ್ಯರ ಸಂಖ್ಯೆ | 28944 |

ಮಂಗಳೂರು
11.08.2023 **ಮಹಾಪ್ರಬಂಧಕರು (ಪ್ರ)**

**ಬ್ಯಾಂಕಿನ ಉಪವಿಧಿ ಸಂಖ್ಯೆ 20 ರಂತೆ ಸದಸ್ಯನು ಬಳಸಿಕೊಳ್ಳಬೇಕಾದ ಕನಿಷ್ಠ ಸೇವೆಗಳು ಅಥವಾ ಸೌಲಭ್ಯಗಳು:**

(1) ಬ್ಯಾಂಕು ಒದಗಿಸುವಂತೆ ಪ್ರತಿ ಸದಸ್ಯನು ಬಳಸಿಕೊಳ್ಳಬೇಕಾದ ಕನಿಷ್ಠ ಸೇವೆಗಳ ಅಥವಾ ಸೌಲಭ್ಯಗಳ ಪ್ರಮಾಣವು ಕೆಳಗಿನಂತಿರತಕ್ಕದ್ದು–

(i) ಸದಸ್ಯನು ಹೊಂದಿರತಕ್ಕ ಕನಿಷ್ಠ ಷೇರು ಬಂಡವಾಳವು ಒಂದು ಸಾವಿರ ರೂಪಾಯಿಗಳು;

(ii) ಸದಸ್ಯನು ಹೊಂದಿರತಕ್ಕ ಕನಿಷ್ಠ ಠೇವಣಿಯು ಐದು ಸಾವಿರ ರೂಪಾಯಿಗಳು; ಅಥವಾ ಸದಸ್ಯನು ಸಾಲ ಪಡೆಯಲು ಅಗತ್ಯವಿದ್ದಲ್ಲಿ, ಬ್ಯಾಂಕು ನಿರ್ಧರಿಸಿದ ಮಿತಿಗೆ ಒಳಪಟ್ಟು ಸದಸ್ಯನ ಕೋರಿಕೆಯ ಮೊತ್ತ; ಅಥವಾ ಸದಸ್ಯನು ತನ್ನ ಚಾಲ್ತಿ ಖಾತೆ ಅಥವಾ ಉಳಿತಾಯ ಖಾತೆಯಲ್ಲಿ ವರ್ಷದಲ್ಲಿ ನಡೆಸಬೇಕಾದ ಕನಿಷ್ಠ ಬ್ಯಾಂಕಿಂಗ್ ವ್ಯವಹಾರಗಳ ಸಂಖ್ಯೆಯು ಹತ್ತು ಇರತಕ್ಕದ್ದು.

(2) ಮೇಲೆ ತಿಳಿಸಿದ ಠೇವಣಿಯು ಸದಸ್ಯನು ವರ್ಷವಿಡೀ ಬ್ಯಾಂಕಿನಲ್ಲಿ ತೊಡಗಿಸಿದ ಎಲ್ಲಾ ತರಹದ ಠೇವಣಿ (ತಗಾದೆ ಮತ್ತು ಅವಧಿ) ಗಳನ್ನು ಒಳಗೊಂಡ ಒಟ್ಟು ಮೊತ್ತ ಆಗಿರತಕ್ಕದ್ದು.

(3) ರಿಸರ್ವ್ ಬ್ಯಾಂಕು ನೀಡಿರುವ 'ನಿಮ್ಮ ಗ್ರಾಹಕನನ್ನು ತಿಳಿಯಿರಿ (ಕೆ.ವೈ.ಸಿ)' ನಿರ್ದೇಶನವು ಬ್ಯಾಂಕಿನ ಸದಸ್ಯರಿಗೆ ಅನ್ವಯಯಿಸತಕ್ಕದ್ದು.

| ಸಂಖ್ಯೆ | ಬ್ಯಾಂಕಿನ ಪ್ರಸ್ತುತ ಉಪನಿಯಮ | ತಿದ್ದುಪಡಿ | ತಿದ್ದುಪಡಿಗೆ ಕಾರಣ |
|---|---|---|---|
| 3 | **ಬ್ಯಾಂಕಿನ ಕಾರ್ಯಕ್ಷೇತ್ರದ ವ್ಯಾಪ್ತಿ :**<br>ಬ್ಯಾಂಕಿನ ಕಾರ್ಯಕ್ಷೇತ್ರದ ವ್ಯಾಪ್ತಿಯು ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ, ಶಿವಮೊಗ್ಗ, ಚಿಕ್ಕಮಂಗಳೂರು, ಹಾಸನ ಮತ್ತು ಕೊಡಗು ಜಿಲ್ಲೆಗಳ ಪ್ರದೇಶಕ್ಕೆ ಸೀಮಿತವಾಗಿರತಕ್ಕದ್ದು. ಈ ಬಗ್ಗೆ ಯಾವುದೇ ಬದಲಾವಣೆಯಾಗಬೇಕಾದಲ್ಲಿ, ಭಾರತೀಯ ರಿಸರ್ವ್ ಬ್ಯಾಂಕು (ಜಿಲ್ಲಾ ವ್ಯಾಪ್ತಿಯೊಳಗಿನ ಕಾರ್ಯಕ್ಷೇತ್ರ ವಿಸ್ತರಣೆ ಹೊರತುಪಡಿಸಿ) ಆಗಿಂದಾಗ್ಗೆ ನೀಡುವ ಸೂಚನೆಗಳ ಅನ್ವಯ ರಿಸರ್ವ್ ಬ್ಯಾಂಕಿನ ಪೂರ್ವಭಾವಿ ಮಂಜೂರಾತಿಯು ಅವಶ್ಯಕ. | **ಬ್ಯಾಂಕಿನ ಕಾರ್ಯಕ್ಷೇತ್ರದ ವ್ಯಾಪ್ತಿ :**<br>ಬ್ಯಾಂಕಿನ ಕಾರ್ಯಕ್ಷೇತ್ರದ ವ್ಯಾಪ್ತಿಯು ಕರ್ನಾಟಕ ರಾಜ್ಯಕ್ಕೆ ಸೀಮಿತವಾಗಿರತಕ್ಕದ್ದು. | ಬ್ಯಾಂಕಿನ ಕಾರ್ಯಕ್ಷೇತ್ರ ವಿಸ್ತರಿಸಿ ಸದಸ್ಯರಿಗೆ ಹೆಚ್ಚಿನ ಸೇವೆಯನ್ನು ನೀಡುವ ಉದ್ದೇಶದಿಂದ |
| 57 | **ಮಂಡಲಿಯ ಸದಸ್ಯರ ಸೇವೆ :** ನಿರ್ದೇಶಕರ ಮಂಡಳಿಯ ಸದಸ್ಯರ ಸೇವೆಯು ಉಚಿತವಾಗಿರುತ್ತದೆಯಾದರೂ ಮಂಡಲಿಯ ಸದಸ್ಯರು ಹಾಗೂ ವ್ಯವಸ್ಥಾಪನಾ ಸಮಿತಿಯ ಸದಸ್ಯರು ಮಂಡಳಿಯ ಅಥವಾ ಸಮಿತಿಯ ಸಭೆಗಳಲ್ಲಿ ಭಾಗವಹಿಸಿದಾಗ ರೂ.1,000/– ಸಭಾಭತ್ಯೆಯನ್ನು ಪಡೆಯಲು ಅರ್ಹರಿರುತ್ತಾರೆ. ಅಲ್ಲದೆ, ಬ್ಯಾಂಕಿನ ಕಾರ್ಯನಿಮಿತ್ತ ಪ್ರವಾಸದ ಸಂದರ್ಭದಲ್ಲಿ ರಾಜ್ಯದ ಒಳಗೆ ರೂ. 4,000/– ಮತ್ತು ಹೊರರಾಜ್ಯದಲ್ಲಿ ರೂ.5,000/– ದಿನಭತ್ಯೆಯನ್ನು ಹಾಗೂ ರೈಲಿನ ಮೂಲಕ ಪ್ರಯಾಣಿಸಿದ್ದಲ್ಲಿ ಹವಾನಿಯಂತ್ರಿತ ಮೂರನೇ ದರ್ಜೆ ರೈಲ್ವೆ/ಒಂದನೇ ದರ್ಜೆ ಪ್ರಯಾಣದ ಒಂದು ಟಿಕೆಟ್ ದರದಷ್ಟು ಮತ್ತು ಬಸ್ ಮೂಲಕ ಪ್ರಯಾಣಿಸಿದ್ದಲ್ಲಿ ಬಸ್ಸಿನ ಒಂದು ಟಿಕೆಟ್ ದರದಷ್ಟು ಪ್ರಯಾಣ ಭತ್ಯೆಯನ್ನು ಪಡೆಯಲು ಅರ್ಹರಿರುತ್ತಾರೆ. | **ಮಂಡಲಿಯ ಸದಸ್ಯರ ಸೇವೆ :** ನಿರ್ದೇಶಕರ ಮಂಡಳಿಯ ಸದಸ್ಯರ ಸೇವೆಯು ಉಚಿತವಾಗಿರುತ್ತದೆಯಾದರೂ ಮಂಡಲಿಯ ಸದಸ್ಯರು ಆಡಳಿತ ಮಂಡಳಿ ಸಭೆಗೆ ಭಾಗವಹಿಸಿದಾಗ ದಕ್ಷಿಣ ಕನ್ನಡ ಜಿಲ್ಲೆಯ ಒಳಗಿನ ಸದಸ್ಯರಿಗೆ ರೂ. 2,000/– ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಹೊರಗಡೆಯ ಸದಸ್ಯರಿಗೆ ರೂ. 2,500/– ಮತ್ತು ಮಂಡಲಿಯ ಸದಸ್ಯರು ಉಪ ಸಮಿತಿಗಳಲ್ಲಿ ಹಾಗೂ ವ್ಯವಸ್ಥಾಪನಾ ಸಮಿತಿಯ ಸದಸ್ಯರು ಸಮಿತಿಯ ಸಭೆಗಳಲ್ಲಿ ಭಾಗವಹಿಸಿದಾಗ ದಕ್ಷಿಣ ಕನ್ನಡ ಜಿಲ್ಲೆಯ ಒಳಗಿನ ಸದಸ್ಯರಿಗೆ ರೂ.1,500/– ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಹೊರಗಡೆಯ ಸದಸ್ಯರಿಗೆ ರೂ.2,000/– ಸಭಾಭತ್ಯೆಯನ್ನು ಪಡೆಯಲು ಅರ್ಹರಿರುತ್ತಾರೆ. ಅಲ್ಲದೆ, ಬ್ಯಾಂಕಿನ ಕಾರ್ಯನಿಮಿತ್ತ ಪ್ರವಾಸದ ಸಂದರ್ಭದಲ್ಲಿ ರಾಜ್ಯದ ಒಳಗೆ ರೂ.5,000/– ಮತ್ತು ಹೊರರಾಜ್ಯದಲ್ಲಿ ರೂ.6,000/– ದಿನಭತ್ಯೆಯನ್ನು ಹಾಗೂ ರೈಲಿನ ಮೂಲಕ ಪ್ರಯಾಣಿಸಿದ್ದಲ್ಲಿ ಹವಾನಿಯಂತ್ರಿತ III ಟಯರ್ ರೈಲ್ವೆ/ಪ್ರಥಮ ವರ್ಗ ಪ್ರಯಾಣದ ಒಂದು ಟಿಕೆಟ್ ದರದಷ್ಟು ಮತ್ತು ಬಸ್ ಮೂಲಕ ಪ್ರಯಾಣಿಸಿದ್ದಲ್ಲಿ ಬಸ್ಸಿನ ಒಂದು ಟಿಕೆಟ್ ದರದಷ್ಟು ಪ್ರಯಾಣ ಭತ್ಯೆಯನ್ನು ಪಡೆಯಲು ಅರ್ಹರಿರುತ್ತಾರೆ. ತುರ್ತು ಸಂದರ್ಭದಲ್ಲಿ ವಿಮಾನ ಯಾನದ ನಿಜವಾದ ದರದಷ್ಟು ಪ್ರಯಾಣ ಭತ್ಯೆಯನ್ನು ಪಡೆಯಲು ಅರ್ಹರಿರುತ್ತಾರೆ. | ಬೆಲೆ ಏರಿಕೆಯ ಕಾರಣ ಪ್ರಯಾಣದ ವೆಚ್ಚವನ್ನು ಭರಿಸಲು |
| 67 | **ಸಿಬ್ಬಂದಿ ಬಲ ಮತ್ತು ನೌಕರರ ವೇತನ ಶ್ರೇಣಿಗಳು :–**<br>2(ಬಿ) ಬ್ಯಾಂಕಿನ ಆರ್ಥಿಕ ಪರಿಸ್ಥಿತಿ, ಲಾಭದಾಯಕತೆ ಮತ್ತು ವ್ಯವಹಾರ ಅಭಿವೃದ್ಧಿಗಳನ್ನು ಆಧರಿಸಿ ಪ್ರತಿ ಸಿಬ್ಬಂದಿಗೆ ಕಾಲಕಾಲಕ್ಕೆ ಕೊಡಬಹುದಾದ ವೇತನ ಶ್ರೇಣಿ, ತುಟ್ಟಿ ಭತ್ಯೆ ಮತ್ತು ಇತರೆ ಭತ್ಯೆಗಳನ್ನು – ಕಾಲಕಾಲಕ್ಕೆ ನಿರ್ಧರಿಸತಕ್ಕದ್ದು.<br>ಪರಂತು, ಬ್ಯಾಂಕಿನ ಆರ್ಥಿಕ ಪರಿಸ್ಥಿತಿಯನ್ನು ಮತ್ತು ಲಾಭದಾಯಕತೆಯನ್ನು ಗಮನದಲ್ಲಿಟ್ಟುಕೊಂಡು ಮಂಡಲಿಯು ನೌಕರರ ವೇತನ ಶ್ರೇಣಿ ಮತ್ತು ಇತರ ಭತ್ಯೆಗಳನ್ನು ಕಾಲಕಾಲಕ್ಕೆ ಅಂದರೆ, ಕನಿಷ್ಠ ಪಕ್ಷ ಐದು ವರ್ಷಗಳಿಗೊಮ್ಮೆ ಪರಿಷ್ಕರಿಸತಕ್ಕದ್ದು.<br>ಅಲ್ಲದೇ ಪರಂತು, ಬ್ಯಾಂಕಿನ ಆಡಳಿತ ಮಂಡಲಿಯು ನೌಕರರಿಗೆ ಪಾವತಿಸುವ ತುಟ್ಟಿ ಭತ್ಯೆಯನ್ನು ಪ್ರತಿ ವರ್ಷ ಜನವರಿ ತಿಂಗಳ ಒಂದನೇ ದಿನದಿಂದ ಮತ್ತು ಜುಲೈ ತಿಂಗಳ ಒಂದನೇ ದಿನದಿಂದ ಪರಿಣಾಮಕ್ಕೆ ಬರುವಂತೆ, ರಾಜ್ಯ ಸರ್ಕಾರವು ತನ್ನ ನೌಕರರಿಗೆ ಮಂಜೂರು ಮಾಡುವ ತುಟ್ಟಿ ಭತ್ಯೆಯ ದರವನ್ನು ಗಮನದಲ್ಲಿಟ್ಟುಕೊಂಡು, ಪರಿಷ್ಕರಿಸತಕ್ಕದ್ದು. | **ಸಿಬ್ಬಂದಿ ಬಲ ಮತ್ತು ನೌಕರರ ವೇತನ ಶ್ರೇಣಿಗಳು :–**<br>2(ಬಿ) ಬ್ಯಾಂಕಿನ ಆರ್ಥಿಕ ಪರಿಸ್ಥಿತಿ, ಲಾಭದಾಯಕತೆ ಮತ್ತು ವ್ಯವಹಾರ ಅಭಿವೃದ್ಧಿಗಳನ್ನು ಆಧರಿಸಿ ಪ್ರತಿ ಸಿಬ್ಬಂದಿಗೆ ಕಾಲಕಾಲಕ್ಕೆ ಕೊಡಬಹುದಾದ ವೇತನ ಶ್ರೇಣಿ, ತುಟ್ಟಿ ಭತ್ಯೆ ಮತ್ತು ಇತರೆ ಭತ್ಯೆಗಳನ್ನು – ಕಾಲಕಾಲಕ್ಕೆ ನಿರ್ಧರಿಸತಕ್ಕದ್ದು.<br>ಪರಂತು, ಬ್ಯಾಂಕಿನ ಆರ್ಥಿಕ ಪರಿಸ್ಥಿತಿಯನ್ನು ಮತ್ತು ಲಾಭದಾಯಕತೆಯನ್ನು ಗಮನದಲ್ಲಿಟ್ಟುಕೊಂಡು ಮಂಡಲಿಯು ನೌಕರರ ವೇತನ ಶ್ರೇಣಿ ಮತ್ತು ಇತರ ಭತ್ಯೆಗಳನ್ನು ಕಾಲಕಾಲಕ್ಕೆ ಅಂದರೆ, ಕನಿಷ್ಠ ಪಕ್ಷ ಐದು ವರ್ಷಗಳಿಗೊಮ್ಮೆ ಪರಿಷ್ಕರಿಸತಕ್ಕದ್ದು.<br>ಅಲ್ಲದೇ ತುಟ್ಟಿ ಭತ್ಯೆಯನ್ನು ಪ್ರತಿ ಆರ್ಥಿಕ ವರ್ಷ ಕೊನೆಗೊಂಡ ನಂತರ ಬ್ಯಾಂಕಿನ ಆರ್ಥಿಕ ಪರಿಸ್ಥಿತಿ ಮತ್ತು ಲಾಭದಾಯಕತೆಯನ್ನು ಗಮನದಲ್ಲಿಟ್ಟುಕೊಂಡು ಬ್ಯಾಂಕಿನ ಆಡಳಿತ ಮಂಡಲಿಯು ನಿರ್ಧರಿಸಿದ ದರದಂತೆ ಕನಿಷ್ಠ ಒಂದು ಬಾರಿ ಪರಿಷ್ಕರಿಸತಕ್ಕದ್ದು. | ಸಿಬ್ಬಂದಿಗಳ ತುಟ್ಟಿಭತ್ಯೆಯನ್ನು ನಿರ್ಧರಿಸುವ ಸಲುವಾಗಿ |

| | | | |
|---|---|---|---|
| 67 | (4) ವಾರ್ಷಿಕ ವೇತನ ಭಡ್ತಿ:<br><br>ಹೊಸ ಸೇರ್ಪಡೆ | **(4) ವಾರ್ಷಿಕ ವೇತನ ಭಡ್ತಿ:** ನಿಯಮ 68(6)ರಲ್ಲಿ ತಿಳಿಸಿದಂತೆ ತಡೆಹಿಡಿದ ಸಂದರ್ಭ ಹೊರತುಪಡಿಸಿ ನೌಕರನು ವಾರ್ಷಿಕ ವೇತನ ಭಡ್ತಿ ಪಡೆಯಬಹುದು. ನೌಕರನು ಅವನ ಸೇವೆ ಸ್ಥಿರೀಕರಣವಾದ ದಿನಾಂಕದಿಂದ 12 ತಿಂಗಳ ನಿರಂತರ ತೃಪ್ತಿಕರ ಸೇವೆಯನ್ನು ಪೂರ್ತಿಗೊಳಿಸಿದ ದಿನದಂದು ವೇತನ ಭಡ್ತಿಗೆ ಅರ್ಹನಾಗುತ್ತಾನೆ. ಅನಂತರ ಪ್ರತಿ 12 ತಿಂಗಳ ನಿರಂತರ ತೃಪ್ತಿಕರ ಸೇವೆ ಪೂರ್ಣವಾದ ದಿನಾಂಕದಂದು ವಾರ್ಷಿಕ ವೇತನ ಭಡ್ತಿ ನೀಡತಕ್ಕದ್ದು. ವಾರ್ಷಿಕ ವೇತನ ಭಡ್ತಿಯನ್ನು ನೌಕರನ ತೃಪ್ತಿಕರ ಸೇವೆಯನ್ನು/ಕಾರ್ಯಕ್ಷಮತೆಯ ವಿಶ್ಲೇಷಣೆಯನ್ನು ಗಮನದಲ್ಲಿಟ್ಟುಕೊಂಡು ಮಂಜೂರು ಮಾಡುವ ಅಧಿಕಾರವು ಆಡಳಿತ ಮಂಡಳಿಗೆ ಇರುತಕ್ಕದ್ದು. | ಸಿಬ್ಬಂದಿ ಸೇವಾ ನಿಯಮಗಳಲ್ಲಿನ ನಿಯಮಗಳನ್ನು ಉಪವಿಧಿಗಳಲ್ಲಿ ಅಳವಡಿಸಲು |
| 68 | 3ಬಿ(i) **ವೈದ್ಯಕೀಯ ಪ್ರಮಾಣ ಪತ್ರ:**<br>ಹೊಸ ಸೇರ್ಪಡೆ | 3ಬಿ(i) **ವೈದ್ಯಕೀಯ ಪ್ರಮಾಣ ಪತ್ರ:** ಬ್ಯಾಂಕಿನ ಸೇವೆಗೆ ನೇಮಕಗೊಂಡು ನೇಮಕಾತಿ ಆದೇಶ ಪಡೆದ ಪ್ರತಿಯೊಬ್ಬ ನೌಕರನು ತನ್ನ ಶಾರೀರಿಕ ಅರ್ಹತೆ ಬಗ್ಗೆ ಬ್ಯಾಂಕ್ ನಿಗದಿಪಡಿಸಿದ ಅಸ್ಪತ್ರೆಯ ನುರಿತ ವೈದ್ಯಾಧಿಕಾರಿಯವರಿಂದ ಪ್ರಮಾಣ ಪತ್ರವನ್ನು (Fitness Certificate) ಪಡೆದು ಕೆಲಸಕ್ಕೆ ಹಾಜರಾಗುವಾಗ ಬ್ಯಾಂಕಿಗೆ ನೀಡತಕ್ಕದ್ದು. | ಸಿಬ್ಬಂದಿ ಸೇವಾ ನಿಯಮಗಳಲ್ಲಿನ ನಿಯಮಗಳನ್ನು ಉಪವಿಧಿಗಳಲ್ಲಿ ಅಳವಡಿಸಲು |
| | **3ಬಿ(ii) ನಿಷ್ಠೆಯ ಬಗ್ಗೆ ಘೋಷಣೆ:**<br>ಹೊಸ ಸೇರ್ಪಡೆ | 3ಬಿ(ii) **ನಿಷ್ಠೆಯ ಬಗ್ಗೆ ಘೋಷಣೆ:** ನೇಮಕಗೊಂಡ ಅಭ್ಯರ್ಥಿಯು ತಾನು ಭಾರತದ ಸಂವಿಧಾನಕ್ಕೂ, ಬ್ಯಾಂಕಿನ ನಿಯಮಗಳಿಗೂ ಬದ್ಧನಾಗಿರುವುದಾಗಿ ಹಾಗೂ ಬ್ಯಾಂಕಿನ ಹಿತದೃಷ್ಟಿಯನ್ನು ಗಮನದಲ್ಲಿರಿಸಿ ಕಾರ್ಯ ನಿರ್ವಹಿಸುವುದಾಗಿ ಮುಚ್ಚಳಿಕೆ ಪ್ರಮಾಣ ಪತ್ರವನ್ನು ನೋಟರಿಯವರಿಂದ ದೃಢೀಕರಿಸಿ ಬ್ಯಾಂಕಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರಿಗೆ ನೀಡತಕ್ಕದ್ದು. ಈ ನಿಯಮಗಳು ಜಾರಿಯಲ್ಲಿ ಬರುವ ಸಮಯದಲ್ಲಿ ಸೇವೆಯಲ್ಲಿರುವ ನೌಕರರ ವಿಚಾರದಲ್ಲಿ ನಿಯಮಗಳು ಸ್ವಯಂಚಾಲಿತವಾಗಿ ಅನ್ವಯವಾಗತಕ್ಕದ್ದು. ತರಬೇತಿಗೆ ನಿಯುಕ್ತಿಯಾದ ನೌಕರನು ಬ್ಯಾಂಕಿಗೆ ಸೂಕ್ತವೆಂದು ಕಂಡಿರುವ ಶರತ್ತುಗಳನ್ನು ಒಪ್ಪಿಗೆಯೆಂದು ಮನಗಂಡು ಸೂಕ್ತ ಛಾಪಾ ಕಾಗದದಲ್ಲಿ (ಬಾಂಡು) ಸಹಿ ಮಾಡಿ ಒಪ್ಪಿಸತಕ್ಕದ್ದು. | ಸಿಬ್ಬಂದಿ ಸೇವಾ ನಿಯಮಗಳಲ್ಲಿನ ನಿಯಮಗಳನ್ನು ಉಪವಿಧಿಗಳಲ್ಲಿ ಅಳವಡಿಸಲು |
| | **3ಬಿ(iii) ಸೇವಾಪೂರ್ವ ಅವಧಿ(ಪ್ರೊಬೇಷನ್)**<br>ಹೊಸ ಸೇರ್ಪಡೆ | 3ಬಿ(iii) **ಸೇವಾಪೂರ್ವ ಅವಧಿ(ಪ್ರೊಬೇಷನ್):** ಬ್ಯಾಂಕಿನ ಯಾವುದೇ ಹುದ್ದೆಗೆ ನೇರ ನೇಮಕಾತಿ ಮೂಲಕ ಭರ್ತಿ ಮಾಡಲಾಗುವ ನೇಮಕಾತಿಯು ಒಂದು ವರ್ಷದ ಸೇವಾಪೂರ್ವ ಅವಧಿಗೆ ಒಳಪಟ್ಟಿರುತ್ತದೆ. ಈ ಅವಧಿಯ ಸೇವೆಯು ಅವನ ಕಾರ್ಯಕ್ಷಮತೆಯ ವಿಶ್ಲೇಷಣೆಯ ಅಧಾರದಲ್ಲಿ ತೃಪ್ತಿಕರವಾಗಿರದಿದ್ದರೆ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರು ಅರ್ಹತಾ ಅವಧಿ ವಿಸ್ತರಣೆಗೊಳ್ಳಬಹುದೆಂದು ಅಭಿಪ್ರಾಯಪಟ್ಟಿದ್ದರೆ, ಸಿಬ್ಬಂದಿಯ ನಿರ್ವಹಣೆ ಸುಧಾರಿಸಲ್ಪಡುವ ಅಥವಾ ತೃಪ್ತಿಕರವೆಂದೆನಿಸುವವರೆಗೆ ತತ್ಸಂಬಂಧ ಆರು ತಿಂಗಳುಗಳಿಗೆ ಮೀರದ ಅವಧಿಗೆ ಲಿಖಿತ ನೋಟೀಸಿನೊಂದಿಗೆ, ಸೇವಾ ಪೂರ್ವ ಅವಧಿಯನ್ನು ವಿಸ್ತರಿಸಬಹುದಾಗಿದೆ. ಸೇವಾಪೂರ್ವ ಅವಧಿಯಲ್ಲಿ ನೌಕರನ ಕೆಲಸ, ನಡತೆ, ಇತ್ಯಾದಿ ಅಸಮರ್ಪಕ ಎಂದು ಕಂಡು ಬಂದಲ್ಲಿ ಬ್ಯಾಂಕಿನ ಸೇವೆಯಿಂದ ಅಂತಹ ನೌಕರನನ್ನು ಸೇವಾಪೂರ್ವ ಅವಧಿ ಮುಕ್ತಾಯವಾಗುವ ಮುನ್ನವೇ ಕಾರಣ ನೀಡದೇ ಬ್ಯಾಂಕಿನ ಕೆಲಸದಿಂದ ಬಿಡುಗಡೆ ಮಾಡಬಹುದಾಗಿದೆ.<br>ನೌಕರರ ಪದೋನ್ನತಿಯು ಆರು ತಿಂಗಳ ನಿರೀಕ್ಷಣಾ ಅವಧಿಗೆ ಒಳಪಟ್ಟಿರುತ್ತದೆ. ಈ ನಿರೀಕ್ಷಣಾ ಅವಧಿಯಲ್ಲಿ ಸೇವೆ ಸಲ್ಲಿಸುತ್ತಿರುವ ನೌಕರನ ಕೆಲಸ ಮತ್ತು ನಡತೆಯು ಸದರಿ ಅವಧಿಯಲ್ಲಿ ಕಾರ್ಯಕ್ಷಮತೆಯ ವಿಶ್ಲೇಷಣೆಯ ಅಧಾರದಲ್ಲಿ ಅತೃಪ್ತಿಕರ ಹಾಗೂ ಅಸಮರ್ಪಕ ಎಂದು ಕಂಡು ಬಂದಲ್ಲಿ ಅಂತಹಾ ನಿರೀಕ್ಷಣಾ ಅವಧಿಯಲ್ಲಿ ಆತನನ್ನು ಭಡ್ತಿ ಪೂರ್ವ ಹುದ್ದೆಗೆ ಹಿಂತಿರುಗಿಸಬಹುದಾಗಿದೆ. | ಸಿಬ್ಬಂದಿ ಸೇವಾ ನಿಯಮಗಳಲ್ಲಿನ ನಿಯಮಗಳನ್ನು ಉಪವಿಧಿಗಳಲ್ಲಿ ಅಳವಡಿಸಲು |
| | 3ಬಿ(iv) **ಭದ್ರತಾ ಠೇವಣಿ:**<br>ಹೊಸ ಸೇರ್ಪಡೆ | **3ಬಿ(iv) ಭದ್ರತಾ ಠೇವಣಿ:** ಬ್ಯಾಂಕು ಕಾಲ ಕಾಲಕ್ಕೆ ನಿಗದಿಪಡಿಸುವ ಪ್ರಮಾಣದ ನಗದು ಭದ್ರತಾ ಠೇವಣಿಯನ್ನು ನೌಕರರು ಪಾವತಿಸತಕ್ಕದ್ದು. ಈ ಭದ್ರತಾ ಠೇವಣಿಯನ್ನು ನೌಕರನು ಬ್ಯಾಂಕಿನಲ್ಲಿ ತನ್ನ ಸೇವಾ ಅವಧಿಯನ್ನು ಮುಕ್ತಾಯಗೊಳಿಸಿ ಬಿಡುಗಡೆಗೊಳ್ಳುವಾಗ ಹಿಂತಿರುಗಿಸಲಾಗುವುದು. ಭದ್ರತಾ ಠೇವಣಿಗೆ ಯಾವುದೇ ಬಡ್ಡಿಯನ್ನು ನೌಕರನಿಗೆ ನೀಡಲಾಗುವುದಿಲ್ಲ. | ಸಿಬ್ಬಂದಿ ಸೇವಾ ನಿಯಮಗಳಲ್ಲಿನ ನಿಯಮಗಳನ್ನು ಉಪವಿಧಿಗಳಲ್ಲಿ ಅಳವಡಿಸಲು |

| | | | |
|---|---|---|---|
| | **3ಬಿ(v) ತರಬೇತಿ:**<br><br>ಹೊಸ ಸೇರ್ಪಡೆ | **3ಬಿ(v) ತರಬೇತಿ:** ಪ್ರತಿಯೊಬ್ಬ ನೌಕರನೂ ಬ್ಯಾಂಕಿನ ಆಡಳಿತ ಮಂಡಳಿಯು ಆಗಿಂದಾಗ್ಗೆ ನಿರ್ಧರಿಸುವ ಯಾವುದೇ ತರಬೇತಿಗೆ ಹಾಜರಾಗತಕ್ಕದ್ದು ಹಾಗೂ ಇಂತಹ ತರಬೇತಿಯ ಅವಧಿಯಲ್ಲಿ ಪೂರ್ಣ ವೇತನ ಹಾಗೂ ತರಬೇತಿಗೆ ಹಾಜರಾಗುವ ಹಾಗೂ ಬ್ಯಾಂಕಿನ ಕೆಲಸಕ್ಕೆ ಹಿಂತಿರುಗುವ ಸಂಬಂಧದಲ್ಲಿ ಪ್ರಯಾಣ ಭತ್ಯೆಗೆ ಅರ್ಹತೆ ಹೊಂದಿರುತ್ತಾರೆ. ಅಲ್ಲದೆ, ಬ್ಯಾಂಕ್ ಏರ್ಪಡಿಸುವ ಯಾವುದೇ ಕಾರ್ಯಕ್ರಮ/ಚಟುವಟಿಕೆಗಳಿಗೆ ಹಾಜರಾಗತಕ್ಕದ್ದು. ಯಾವುದೇ ನೌಕರನು ಈ ರೀತಿಯ ತರಬೇತಿಯ ಅಥವಾ ಯಾವುದೇ ಕಾರ್ಯಕ್ರಮ/ಚಟುವಟಿಕೆಗಳ ಆದೇಶವನ್ನು ಉಲ್ಲಂಘಿಸಿದಲ್ಲಿ ಇದನ್ನು ಬ್ಯಾಂಕಿನ ಆದೇಶಗಳ ಉಲ್ಲಂಘನೆ ಹಾಗೂ ಅವಿಧೇಯತೆ ಎಂದು ಪರಿಗಣಿಸಿ ಶಿಸ್ತು ಕ್ರಮ ಕೈಗೊಳ್ಳಬಹುದು. ತರಬೇತಿ ನೀಡಿದ ನಂತರವೂ ಹುದ್ದೆಗೆ ಬೇಕಾದ ಕೌಶಲ್ಯ/ಪರಿಣತಿಯನ್ನು ಪಡೆಯಲು ವಿಫಲವಾದ ನೌಕರನನ್ನು ಕೆಳಗಿನ ಹುದ್ದೆಗೆ ಹಿಂತಿರುಗಿಸಬಹುದಾಗಿದೆ. | ಸಿಬ್ಬಂದಿ ಸೇವಾ ನಿಯಮಗಳಲ್ಲಿನ ನಿಯಮಗಳನ್ನು ಉಪವಿಧಿಗಳಲ್ಲಿ ಅಳವಡಿಸಲು |
| | **3ಬಿ(vi) ಪದತ್ಯಾಗ ಮಾಡುವುದು (ರಾಜಿನಾಮೆ ಕೊಡುವುದು):**<br><br>ಹೊಸ ಸೇರ್ಪಡೆ | **3ಬಿ(vi) ಪದತ್ಯಾಗ ಮಾಡುವುದು (ರಾಜಿನಾಮೆ ಕೊಡುವುದು):**<br>ಅ) ಖಾಯಂ ನೌಕರನು ಬ್ಯಾಂಕಿನ ಸೇವೆಗೆ ರಾಜಿನಾಮೆ ಕೊಡಲು ಇಚ್ಛಿಸಿದಲ್ಲಿ, ಬ್ಯಾಂಕಿಗೆ ಮೂರು ತಿಂಗಳ ಅವಧಿಯ ಲಿಖಿತಸೂಚನಾ ಪತ್ರವನ್ನು ಮುಂಗಡವಾಗಿ ಕೊಡಬೇಕು. ತಪ್ಪಿದಲ್ಲಿ ಅವನು ಮೂರು ತಿಂಗಳ ವೇತನ ಮತ್ತು ಭತ್ಯೆಗಳ ಸಮಾನವಾದ ಮೊತ್ತದ ಹಣವನ್ನು ಬ್ಯಾಂಕಿಗೆ ಬಿಟ್ಟುಕೊಡಲು ಬಾಧ್ಯಸ್ಥನಾಗಿರುತ್ತಾನೆ.<br>ಆ) ಸೇವಾ ಪೂರ್ವ ಅವಧಿಯಲ್ಲಿ ನೌಕರನು ರಾಜಿನಾಮೆ ಕೊಡಲು ಇಚ್ಛಿಸಿದಲ್ಲಿ ಬ್ಯಾಂಕಿಗೆ ಮೂರು ತಿಂಗಳ ಅವಧಿಯ ಲಿಖಿತ ಸೂಚನಾ ಪತ್ರ ಕೊಡಬೇಕು. ತಪ್ಪಿದಲ್ಲಿ ಅವನು ಮೂರು ತಿಂಗಳ ವೇತನ ಮತ್ತು ಭತ್ಯೆಗಳಿಗೆ ಸಮಾನವಾದ ಮೊತ್ತದ ಹಣ ಕೊಡಲು ಬಾಧ್ಯಸ್ಥನಾಗಿರುತ್ತಾನೆ.<br>ಇ) ನೌಕರನ ದುರ್ವರ್ತನೆಯ ಬಗ್ಗೆ ವಿಚಾರಣೆ ನಡೆದಿರುವಾಗ ಆಡಳಿತ ಮಂಡಳಿಯ ಅನುಮತಿ ಇಲ್ಲದೇ ನೌಕರನ ರಾಜೀನಾಮೆಯನ್ನು ಅಂಗೀಕರಿಸಬಾರದು. ನೌಕರನ ರಾಜೀನಾಮೆಯನ್ನು ಆಡಳಿತ ಮಂಡಳಿಯ ಮುಂದೆ ಹಾಜರುಪಡಿಸಿದಾಗ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರು ಅವನ ವಿರುದ್ಧ ಯಾವುದೇ ದೋಷಾರೋಪಣಗಳ ವಿಚಾರಣೆಯು ಪೂರ್ಣಗೊಂಡಿರದ ಅಥವಾ ಅವನಿಂದ ಬ್ಯಾಂಕಿಗೆ ಯಾವುದೇ ಋಣಗಳು ಬಾಕಿ ಬರಬೇಕಾದ ವಿಷಯವಿದ್ದಲ್ಲಿ ವಿಸ್ತೃತ ಲಿಖಿತ ರೂಪದಲ್ಲಿ ತಿಳಿಸಬೇಕು.<br>ಈ) ನೌಕರನ ರಾಜೀನಾಮೆಯನ್ನು ಸ್ವೀಕರಿಸುವ ಪ್ರಾಧಿಕಾರಿಯು ಅವನ ವಿರುದ್ಧ ಇರುವ ಬ್ಯಾಂಕಿನ ಎಲ್ಲಾ ಕೋರಿಕೆಗಳನ್ನು ಒಂದೇ ಸಲಕ್ಕೆ ಹೊಂದಾಣಿಕೆ ಮಾಡಬೇಕು ಮತ್ತು ಅವನ ರಾಜೀನಾಮೆಯನ್ನು ಅವನ ಲೆಕ್ಕವು ಪೂರ್ತಿಯಾಗಿ ಹೊಂದಾಣಿಕೆಯಾಗುವವರೆಗೆ ಮತ್ತು ಅವನು ಬ್ಯಾಂಕಿನ ಹುದ್ದೆಯ ಪ್ರಭಾರವನ್ನು ಹಸ್ತಾಂತರ ಮಾಡುವವರೆಗೆ ಅಂಗೀಕರಿಸಬಾರದು.<br>ಉ) ಒಂದು ವೇಳೆ ನೌಕರನು ಅವನ ರಾಜೀನಾಮೆಯನ್ನು ಕೊಡದೆ ಅವನ ಹುದ್ದೆಯಿಂದ ಬಿಟ್ಟು ಹೋದರೆ ಅಥವಾ ಅವನು ರಾಜೀನಾಮೆ ಹಾಜರುಪಡಿಸಿ ಅಂಗೀಕಾರವಾದ ಬಗ್ಗೆ ತಿಳುವಳಿಕೆ ಪತ್ರ ಪಡೆದುಕೊಳ್ಳುವ ಮೊದಲು ಅವನ ಹುದ್ದೆಯನ್ನು ಬಿಟ್ಟು ಹೋದರೆ ಆಡಳಿತ ಮಂಡಳಿಯು ನಿರ್ಧರಿಸಿದಂತೆ ಮೂರು ತಿಂಗಳ ಉಪಲಬ್ಧಗಳಿಗೆ ಸಮಾನ ಮೊತ್ತದ ಹಣವನ್ನು ಅವನಿಗೆ ಕೊಡಬಹುದಾದ ಅವನ ಭದ್ರತಾ ಠೇವಣಿಯ ಅಥವಾ ಅವನ ಗ್ರಾಚ್ಯುಯಿಟಿಯಲ್ಲಿ ಶೇಖರವಾದ ಹಣದಿಂದ ವಸೂಲಿ ಮಾಡಬೇಕು.<br>ಊ) ಯಾವುದೇ ನೌಕರನ ರಾಜೀನಾಮೆಯು ಆಡಳಿತ ಮಂಡಳಿ ಅಂಗೀಕರಿಸಿದ ನಂತರ ಮಾತ್ರ ಚಾಲನೆಯಲ್ಲಿ ಬರುತ್ತದೆ ಎಂದು ಪರಿಗಣಿಸಬೇಕು. | ಸಿಬ್ಬಂದಿ ಸೇವಾ ನಿಯಮಗಳಲ್ಲಿನ ನಿಯಮಗಳನ್ನು ಉಪವಿಧಿಗಳಲ್ಲಿ ಅಳವಡಿಸಲು |

| | | | |
|---|---|---|---|
| | **(4) ನಿವೃತ್ತಿ ವಯಸ್ಸು :**<br>ಯಾವುದೇ ಬ್ಯಾಂಕಿನ ನೌಕರ ಅಥವಾ ಅಧಿಕಾರಿಯ ವಯೋನಿವೃತ್ತಿ ದಿನಾಂಕವು ಆತನು ಅರವತ್ತು ವರ್ಷಗಳ ವಯಸ್ಸನ್ನು ಪೂರೈಸುವ ತಿಂಗಳ ಕೊನೆಯ ದಿನಾಂಕವಾಗಿರತಕ್ಕದ್ದು. ಯಾವುದೇ ತಿಂಗಳ ಪ್ರಥಮ ದಿನದ ನಂತರದ ಯಾವುದೇ ದಿನದಂದು ಒಬ್ಬ ನೌಕರನು ವಯೋನಿವೃತ್ತಿಯ ವಯಸ್ಸನ್ನು ಪೂರೈಸಿದ್ದಲ್ಲಿ ಆತನು ತಿಂಗಳ ಕೊನೆಯ ದಿನದಂದು ನಿವೃತ್ತಿ ಹೊಂದುವವನು. ಆದರೆ ಯಾವುದೇ ಬ್ಯಾಂಕಿನ ನೌಕರ ಅಥವಾ ಅಧಿಕಾರಿಯ ಜನ್ಮ ದಿನಾಂಕ ತಿಂಗಳ ಪ್ರಥಮ ದಿನವಾಗಿದ್ದರೆ ಆತನು ತನ್ನ ಆರವತ್ತು ವರ್ಷಗಳ ವಯಸ್ಸನ್ನು ಪೂರೈಸುವ ಹಿಂದಿನ ತಿಂಗಳ ಕೊನೆಯ ದಿನದ ಮಧ್ಯಾಹ್ನ ನಿವೃತ್ತಿ ಹೊಂದುವವನು. ಆದಾಗ್ಯೂ ಬ್ಯಾಂಕಿನ ಉಪನಿಯಮದಲ್ಲಿ ಪ್ರಾವದಾನವಿದ್ದಲ್ಲಿ ಯಾವುದೇ ನೌಕರನು ತನ್ನ 15 ವರ್ಷಗಳ ಸಮರ್ಪಕ ಸೇವೆಯ ನಂತರ ಅಥವಾ ಐವತ್ತು ವರ್ಷಗಳನ್ನು ಪೂರೈಸಿದ ನಂತರದ ಯಾವುದೇ ದಿನದಂದು ಸ್ವಇಚ್ಛೆಯಿಂದ ನಿವೃತ್ತಿ ಹೊಂದಲು ಲಿಖಿತದಲ್ಲಿ ಮನವಿ ಸಲ್ಲಿಸಿದಲ್ಲಿ, ಆತನ ಮನವಿಯನ್ನು ಪರಿಗಣಿಸಿ ಮಂಡಲಿಯು ಆತನಿಗೆ ಸ್ವಇಚ್ಛೆ ನಿವೃತ್ತಿ ಹೊಂದಲು ಅನುಮತಿ ನೀಡಬಹುದು. | **(4) ನಿವೃತ್ತಿ ವಯಸ್ಸು :**<br>ಅ) ಬ್ಯಾಂಕಿನ ಯಾವುದೇ ನೌಕರ ಅಥವಾ ಅಧಿಕಾರಿಯ ವಯೋನಿವೃತ್ತಿ ದಿನಾಂಕವು ಆತನು ಅರವತ್ತು ವರ್ಷಗಳ ವಯಸ್ಸನ್ನು ಪೂರೈಸುವ ತಿಂಗಳ ಕೊನೆಯ ದಿನಾಂಕವಾಗಿರತಕ್ಕದ್ದು. ಯಾವುದೇ ತಿಂಗಳ ಪ್ರಥಮ ದಿನದ ನಂತರದ ಯಾವುದೇ ದಿನದಂದು ಒಬ್ಬ ನೌಕರನು ವಯೋನಿವೃತ್ತಿಯ ವಯಸ್ಸನ್ನು ಪೂರೈಸಿದ್ದಲ್ಲಿ ಆತನು ತಿಂಗಳ ಕೊನೆಯ ದಿನದಂದು ನಿವೃತ್ತಿ ಹೊಂದುವವನು. ಆದರೆ ಯಾವುದೇ ಬ್ಯಾಂಕಿನ ನೌಕರ ಅಥವಾ ಅಧಿಕಾರಿಯ ಜನ್ಮ ದಿನಾಂಕ ತಿಂಗಳ ಪ್ರಥಮ ದಿನವಾಗಿದ್ದರೆ ಆತನು ತನ್ನ ಆರವತ್ತು ವರ್ಷಗಳ ವಯಸ್ಸನ್ನು ಪೂರೈಸುವ ಹಿಂದಿನ ತಿಂಗಳ ಕೊನೆಯ ದಿನದ ಮಧ್ಯಾಹ್ನ ನಿವೃತ್ತಿ ಹೊಂದುವವನು. ಆದಾಗ್ಯೂ ಬ್ಯಾಂಕಿನ ಉಪನಿಯಮದಲ್ಲಿ ಪ್ರಾವಧಾನವಿದ್ದಲ್ಲಿ ಯಾವುದೇ ನೌಕರನು ತನ್ನ 20 ವರ್ಷಗಳ ಸಮರ್ಪಕ ಸೇವೆಯ ನಂತರ ಅಥವಾ ಐವತ್ತು ವರ್ಷಗಳನ್ನು ಪೂರೈಸಿದ ನಂತರದ ಯಾವುದೇ ದಿನದಂದು ಸ್ವಇಚ್ಛೆಯಿಂದ ನಿವೃತ್ತಿ ಹೊಂದಲು ಲಿಖಿತ ಮುಖೇನ ಮನವಿ ಸಲ್ಲಿಸಿದಲ್ಲಿ, ಆತನ ಮನವಿಯನ್ನು ಪರಿಗಣಿಸಿ ಆಡಳಿತ ಮಂಡಲಿಯು ಆತನಿಗೆ ಸ್ವಇಚ್ಛೆ ನಿವೃತ್ತಿ ಹೊಂದಲು ಅನುಮತಿ ನೀಡಬಹುದು.<br>ಆ) ಯಾವುದೇ ನೌಕರನು ವೈದ್ಯಕೀಯ ಆಧಾರದಿಂದ ಸೇವೆಗೆ ಅನರ್ಹನೆಂದು ಘೋಷಿಸಲ್ಪಟ್ಟಾಗ ನಿವೃತ್ತಿಯಾಗುತ್ತಾನೆ.<br>ಇ) ಸ್ವಇಚ್ಛಾ/ಅವಧಿ ಪೂರ್ವ ನಿವೃತ್ತಿ ಹೊಂದುವ ನೌಕರನು, ಆತನು ಬ್ಯಾಂಕಿನಲ್ಲಿ ಸಲ್ಲಿಸಿರುವ ಸೇವಾ ಅವಧಿಗೆ ಅನುಗುಣವಾಗಿ ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರಲ್ಲಿ ತಿಳಿಸಿದ ಪ್ರಮಾಣದಲ್ಲಿ ನಿವೃತ್ತಿ ಸೌಲಭ್ಯಗಳನ್ನು ಭವಿಷ್ಯ ನಿಧಿ ಮತ್ತು ಆತನ ಖಾತೆಯಲ್ಲಿ ಜಮೆಯಿರುವ ಗಳಿಕೆ ರಜೆಯನ್ನು 240 ದಿನಗಳ ಗರಿಷ್ಠ ಮಿತಿಗೊಳಪಟ್ಟು ನಗದೀಕರಣ ಸೌಲಭ್ಯವನ್ನು ಪಡೆಯಲು ಅರ್ಹನಾಗುತ್ತಾನೆ. | ಸ್ವಇಚ್ಛೆ ನಿವೃತ್ತಿ ಅವಧಿಯನ್ನು ನಿಗದಿಪಡಿಸಲು |
| 68 | **(5) ರಜೆ ಸೌಕರ್ಯಗಳು :**<br>(i) ರಜೆಯನ್ನು ಹಕ್ಕಿನಂತೆ ಕ್ಲೇಮು ಮಾಡಲಾಗದು, ಯಾವನೇ ನೌಕರನು ರಜೆಯ ಮುಂದುವರಿಕೆಯಲ್ಲಿ ಅಥವಾ ಅನ್ಯಥಾ ಪೂರ್ವ ಮಂಜೂರಾತಿಯಿಲ್ಲದೆ ಉದ್ದೇಶ ಪೂರ್ವಕವಾಗಿ ಗೈರು ಹಾಜರಾದರೆ ಅವನು ಶಿಸ್ತಿನ ಕ್ರಮಕ್ಕೆ ಗುರಿಯಾಗಲು ಬಾಧ್ಯನಾಗಿರತಕ್ಕದ್ದು.<br><br>**(ii) ಸಾಂಧರ್ಭಿಕ ರಜೆ:** ಒಂದು ಕ್ಯಾಲೆಂಡರು ವರ್ಷದಲ್ಲಿ ಒಬ್ಬ ನೌಕರನಿಗೆ ಹದಿನೈದು ದಿನಗಳ ಸಾಂದರ್ಭಿಕ ರಜೆಯನ್ನು ಮಂಜೂರು ಮಾಡಬಹುದು. ಸಾಂದರ್ಭಿಕ ರಜೆಯನ್ನು ವರ್ಷದಿಂದ ವರ್ಷಕ್ಕೆ ಒಟ್ಟುಗೂಡಿಸಿಕೊಳ್ಳತಕ್ಕದ್ದಲ್ಲ ಅಥವಾ ಮುಂದಕ್ಕೊಯ್ಯಲಾಗತಕ್ಕದ್ದಲ್ಲ. ಸಾಮಾನ್ಯವಾಗಿ ಒಂದು ಸಲಕ್ಕೆ, ಮಧ್ಯಂತರದಲ್ಲಿ ರಜೆಗಳು ಸಾರ್ವತ್ರಿಕ ರಜೆಗಳು ಸೇರಿದಂತೆ, ಏಳು ದಿನಗಳಿಗಿಂತ ಹೆಚ್ಚಾಗಿ ಸಾಂದರ್ಭಿಕ ರಜೆಯನ್ನು ಅನುಮತಿಸತಕ್ಕುದಲ್ಲ. | **(5) ರಜೆ ಸೌಕರ್ಯಗಳು :**<br>(i) ಅ) ಯಾವುದೇ ಪ್ರವರ್ಗದ ರಜೆಯನ್ನು ನೌಕರನು ಹಕ್ಕು ಚಲಾಯಿಸಿ ಕೇಳಲು ಬರುವುದಿಲ್ಲ ಮತ್ತು ಬ್ಯಾಂಕಿನ ಸೇವೆಯ ಅವಶ್ಯಕತೆ ಹಾಗೂ ಸಂದರ್ಭಗಳಿಗೆ ಅನುಸಾರವಾಗಿ ರಜೆ ಮಂಜೂರಾತಿ ಮಾಡಲಾಗುವುದು. ಸೇವೆಗೆ ಅವಶ್ಯಕತೆ ಇದ್ದಲ್ಲಿ ವೈದ್ಯಕೀಯ ರಜೆಯ ಮೇಲೆ ಅಥವಾ ಪ್ರಸೂತಿ ರಜೆಯ ಮೇಲೆ ಇರುವ ನೌಕರರನ್ನು ಹೊರತುಪಡಿಸಿ ಉಳಿದ ನೌಕರರನ್ನು ಕೆಲಸಕ್ಕೆ ವಾಪಾಸು ಕರೆಯಿಸಿಕೊಳ್ಳಬಹುದು.<br>ಆ) ಸೇವಾ ಪೂರ್ವ ಅವಧಿಯಲ್ಲಿರುವ (ಪ್ರೊಬೇಷನ್) ನೌಕರನಿಗೆ ಪ್ರತಿ ಪೂರ್ಣಗೊಂಡ ಕ್ಯಾಲೆಂಡರ್ ತಿಂಗಳ ಸೇವೆಗೆ ಒಂದು ದಿನದ ಸಾಂಧರ್ಭಿಕ ರಜೆಯನ್ನು ಮಂಜೂರು ಮಾಡಬಹುದು.<br>ಇ) ಬ್ಯಾಂಕಿನ ದೈನಂದಿನ ವ್ಯವಹಾರಕ್ಕೆ ತೊಂದರೆ ಆಗುವುದಾದರೆ ರಜೆ ನಿರಾಕರಿಸುವ ಅಧಿಕಾರವನ್ನು ಮಂಜೂರು ಮಾಡುವ ಅಧಿಕಾರಿಯ ವಿವೇಚನೆಗೆ ಬಿಡಲಾಗಿರುತ್ತದೆ. ಕಾಯಿಲೆ ರಜೆ ಬಿಟ್ಟು ಯಾವುದೇ ರಜೆಯಲ್ಲಿ ಹೋಗುವ ನೌಕರನು ಆತನ ರಜೆಯ ಅವಧಿಯಲ್ಲಿ ಬ್ಯಾಂಕಿನಲ್ಲಿ ಏರ್ಪಡಿಸುವ ತರಬೇತಿ ಹಾಗೂ ಇತರ ಕಾರ್ಯಕ್ರಮಗಳಿಗೆ ಹಾಜರಾಗತಕ್ಕದ್ದು.<br><br>**(ii) ಸಾಂದರ್ಭಿಕ ರಜೆ:** ಒಂದು ಕ್ಯಾಲೆಂಡರು ವರ್ಷದಲ್ಲಿ ಒಬ್ಬ ನೌಕರನಿಗೆ ಹದಿನೆರಡು ದಿನಗಳ ಸಾಂದರ್ಭಿಕ ರಜೆಯನ್ನು ಮಂಜೂರು ಮಾಡಬಹುದು. ಸಾಂದರ್ಭಿಕ ರಜೆಯನ್ನು ವರ್ಷದಿಂದ ವರ್ಷಕ್ಕೆ ಒಟ್ಟುಗೂಡಿಸಿಕೊಳ್ಳತಕ್ಕದ್ದಲ್ಲ ಅಥವಾ ಮುಂದಕ್ಕೊಯ್ಯಲಾಗತಕ್ಕದ್ದಲ್ಲ. ಸಾಮಾನ್ಯವಾಗಿ ಒಂದು ಸಲಕ್ಕೆ, ಮಧ್ಯಂತರದಲ್ಲಿ ರಜೆಗಳು ಸಾರ್ವತ್ರಿಕ ರಜೆಗಳು ಸೇರಿದಂತೆ, ಆರು ದಿನಗಳಿಗಿಂತ ಹೆಚ್ಚಾಗಿ ಸಾಂದರ್ಭಿಕ ರಜೆಯನ್ನು ಅನುಮತಿಸತಕ್ಕದ್ದಲ್ಲ. ಆದರೆ ವರ್ಷದ ಮೊದಲಾರ್ಧದಲ್ಲಿ ಆರು ದಿನಗಳ ರಜೆ ಮೀರಬಾರದು. | ಸಿಬ್ಬಂದಿ ಸೇವಾ ನಿಯಮಗಳಲ್ಲಿನ ನಿಯಮಗಳನ್ನು ಉಪವಿಧಿಗಳಲ್ಲಿ ಅಳವಡಿಸಲು |

| | | | |
|---|---|---|---|
| | **(iii) ಗಳಿಕೆ ರಜೆ:** (ಎ) ಒಬ್ಬ ನೌಕರನು ಕರ್ತವ್ಯದ ಮೇಲೆ ಕಳೆದ ಅವಧಿಯ ಹನ್ನೊಂದನೇ ಒಂದರ ದರದಲ್ಲಿ ಪೂರ್ಣ ವೇತನದ 'ಗಳಿಕೆ ರಜೆ'ಗೆ ಹಕ್ಕುಳ್ಳವನಾಗಿರತಕ್ಕದ್ದು. ಯಾವುದೇ ನೌಕರನು ಕ್ಯಾಲೆಂಡರ್ ವರ್ಷದ ಮಧ್ಯದಲ್ಲಿ ನೇಮಕವಾದಾಗ, ಪ್ರತಿ ಪೂರ್ಣಗೊಂಡ ಕ್ಯಾಲೆಂಡರ್ ತಿಂಗಳ ಸೇವೆಗೆ ಎರಡುವರೆ ದಿನಗಳ ದರದಂತೆ ಗಳಿಕೆ ರಜೆಯನ್ನು ಜಮಾ ಮಾಡತಕ್ಕದ್ದು. 300 ದಿನಗಳ ಗರಿಷ್ಠ ಅವಧಿಯವರೆಗೆ ಒಟ್ಟುಗೂಡಿಸಿಕೊಳ್ಳಬಹುದು; | **(iii) ಗಳಿಕೆ ರಜೆ:** (ಎ) ಒಬ್ಬ ನೌಕರನು ಕರ್ತವ್ಯದ ಮೇಲೆ ಕಳೆದ ಅವಧಿಯ ಪ್ರತಿ ಪೂರ್ಣಗೊಂಡ ಕ್ಯಾಲೆಂಡರ್ ತಿಂಗಳ ಸೇವೆಗೆ ಎರಡೂವರೆ ದಿನಗಳ ದರದಂತೆ ಗಳಿಕೆ ರಜೆಯನ್ನು ಜಮಾ ಮಾಡತಕ್ಕದ್ದು. ಮುನ್ನೂರು(300) ದಿನಗಳ ಗರಿಷ್ಠ ಮಿತಿಯ ಗಳಿಕೆ ರಜೆಯನ್ನು ಒಟ್ಟುಗೂಡಿಸಬಹುದು. ಗಳಿಕೆ ರಜೆಯನ್ನು ಕ್ಯಾಲೆಂಡರ್ ವರ್ಷಕ್ಕೆ ನಾಲ್ಕು ಬಾರಿಗೆ ಮೀರದಂತೆ ಪಡೆಯಬಹುದಾಗಿದೆ ಮತ್ತು ಒಮ್ಮೆಗೆ ನಾಲ್ಕು ದಿನಗಳಿಗೆ ಕಡಿಮೆ ಇಲ್ಲದಂತೆ ಈ ರಜೆಯನ್ನು ಪಡೆಯತಕ್ಕದ್ದು. ತುರ್ತು ಅನಾರೋಗ್ಯ ಹೊರತುಪಡಿಸಿ ಈ ರಜೆಯನ್ನು ಪಡೆಯಲು 15 ದಿನ ಮುಂಚಿತವಾಗಿ ರಜಾ ಅರ್ಜಿ ನೀಡತಕ್ಕದ್ದು. ಒಂದು ವೇಳೆ ಈ ರೀತಿ ಮುಂಚಿತವಾಗಿ ಅರ್ಜಿ ಸಲ್ಲಿಸದಿದ್ದರೆ ರಜೆ ಮಂಜೂರು ಮಾಡುವ ಅಥವಾ ನಿರಾಕರಿಸುವ ಅಧಿಕಾರವನ್ನು ಮಂಜೂರು ಮಾಡುವ ಪ್ರಾಧಿಕಾರ ಹೊಂದಿರುತ್ತದೆ. | ರಜೆ ಸೌಕರ್ಯಗಳ ಬಗ್ಗೆ ಸ್ಪಷ್ಟತೆ ನಮೂದಿಸುವ ಹಾಗೂ ಬ್ಯಾಂಕಿನ ಹಿತದೃಷ್ಟಿಯಿಂದ |
| | (ಇ) ಒಂದು ಬ್ಲಾಕ್ ಅವಧಿಯ ಎರಡು ವರ್ಷಗಳಲ್ಲಿ ಒಂದು ಸಲ ನಗದೀಕರಣಕ್ಕಾಗಿ ನೌಕರನು ಮೂವತ್ತು ದಿವಸಗಳ ಗಳಿಕೆರಜೆಯನ್ನು ನಗದೀಕರಿಸಲು ಒಪ್ಪಿಸಲು ಅನುಮತಿಸಬಹುದು. ರಜೆಯನ್ನು ಒಪ್ಪಿಸಿದ ತಿಂಗಳಿನಲ್ಲಿ ದಿವಸಗಳ ಸಂಖ್ಯೆಯನ್ನು ಗಣನೆಗೆ ತೆಗೆದುಕೊಳ್ಳದೆ, ಒಪ್ಪಿಸಿದ ರಜೆಯ ಪ್ರತಿ ದಿನಕ್ಕೆ ವೇತನದ 1/30ರ ದರದಂತೆ, ಒಪ್ಪಿಸಿದ ರಜೆಗೆ ಸಮನಾದ ವೇತನವನ್ನು ಲೆಕ್ಕಾಚಾರ ಮಾಡತಕ್ಕದ್ದು. ಗಳಿಕೆ ರಜೆಯ ನಗದೀಕರಣದ ಸೌಲಭ್ಯವು ದಿನಗೂಲಿ ಆಧಾರದ ಮೇಲೆ ಅಥವಾ ಪೂರ್ಣವಾಗಿ ಹಂಗಾಮಿ ಆಧಾರದ ಮೇಲೆ ಅಥವಾ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಹೊಂದಿದ ವ್ಯಕ್ತಿಗಳಿಗೆ ಅನ್ವಯಿಸತಕ್ಕದ್ದಲ್ಲ. | (ಇ) ಒಂದು ಬ್ಲಾಕ್ ಅವಧಿಯ ಎರಡು ವರ್ಷಗಳಲ್ಲಿ ಒಂದು ಸಲ ನಗದೀಕರಣಕ್ಕಾಗಿ ನೌಕರನು ಮೂವತ್ತು ದಿವಸಗಳ ಗಳಿಕೆ ರಜೆಯನ್ನು ನಗದೀಕರಿಸಲು ಒಪ್ಪಿಸಲು ಅನುಮತಿಸಬಹುದು. ಇದಕ್ಕಾಗಿ ನೌಕರನು ಒಂದು ತಿಂಗಳ ಮುಂಚಿತವಾಗಿ ಅರ್ಜಿ ಸಲ್ಲಿಸಿ ಮಂಜೂರಾತಿ ಪಡೆಯಬೇಕಾಗಿದೆ. ರಜೆಯನ್ನು ಒಪ್ಪಿಸಿದ ತಿಂಗಳಿನಲ್ಲಿ ದಿವಸಗಳ ಸಂಖ್ಯೆಯನ್ನು ಗಣನೆಗೆ ತೆಗೆದುಕೊಳ್ಳದೆ, ಒಪ್ಪಿಸಿದ ರಜೆಯ ಪ್ರತಿ ದಿನಕ್ಕೆ ವೇತನದ 1/30ರ ದರದಂತೆ, ಒಪ್ಪಿಸಿದ ರಜೆಗೆ ಸಮನಾದ ವೇತನವನ್ನು ಲೆಕ್ಕಾಚಾರ ಮಾಡತಕ್ಕದ್ದು. ಗಳಿಕೆ ರಜೆಯ ನಗದೀಕರಣದ ಸೌಲಭ್ಯವು ದಿನಗೂಲಿ ಆಧಾರದ ಮೇಲೆ ಅಥವಾ ಪೂರ್ಣವಾಗಿ ಹಂಗಾಮಿ ಆಧಾರದ ಮೇಲೆ ಅಥವಾ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಹೊಂದಿದ ವ್ಯಕ್ತಿಗಳಿಗೆ ಅನ್ವಯಿಸತಕ್ಕದ್ದಲ್ಲ. ಗಳಿಕೆ ರಜೆ ನಗದೀಕರಿಸಿದ ಮೇಲೆ ಈ ಅವಧಿಗೆ ಪೂರ್ವಾನ್ವಯವಾಗಿ ವೇತನ, ಭತ್ಯೆ ಹೆಚ್ಚಳವಾದಲ್ಲಿ ಯಾವುದೇ ಕಾರಣಕ್ಕೂ ಗಳಿಕೆ ರಜೆ ನಗದೀಕರಣ ವೇತನ ವ್ಯತ್ಯಾಸದ ಬಾಕಿ ನೀಡಲು ಅವಕಾಶವಿಲ್ಲ. | |
| | **(v) ಅರ್ಧ ವೇತನದ ರಜೆ:**<br>(ಎಫ್) ಹೊಸ ಸೇರ್ಪಡೆ | **(v) ಅರ್ಧ ವೇತನದ ರಜೆ:**<br>ಎಫ್) ನೌಕರನು ಇಚ್ಛಿಸಿದಲ್ಲಿ ಅರ್ಧ ವೇತನದ "ಕಾಯಿಲೆ ರಜೆ"ಯನ್ನು ಪರಿವರ್ತಿಸಿ ಪೂರ್ಣವೇತನದೊಂದಿಗೆ ರಜೆಯನ್ನು ಮಂಜೂರು ಮಾಡಬಹುದು. ಅರ್ಧ ವೇತನದ "ಕಾಯಿಲೆ ರಜೆ" ಮಂಜೂರು ಮಾಡುವ ಅಥವಾ ರದ್ದುಮಾಡುವ ಅಥವಾ ಮಾರ್ಪಾಡು ಮಾಡುವ ಅಧಿಕಾರವು ರಜೆ ಮಂಜೂರಾತಿ ಪ್ರಾಧಿಕಾರಕ್ಕೆ ಇರುತ್ತದೆ. | |
| | ಜಿ) ಹೊಸ ಸೇರ್ಪಡೆ | ಜಿ) ಅರ್ಧ ವೇತನ ರಜೆಯನ್ನು ಪಡೆಯುವ ನೌಕರನು ಅಂತಹ ರಜೆ ಮೇಲೆ ಹೋಗುವ ವಿಚಾರದಲ್ಲಿ ಬ್ಯಾಂಕಿಗೆ ಲಿಖಿತ ತಿಳುವಳಿಕೆಯನ್ನು ನೀಡತಕ್ಕದ್ದು. ತುರ್ತು ಅನಾರೋಗ್ಯ ಹೊರತುಪಡಿಸಿ ಈ ರಜೆಯನ್ನು ಪಡೆಯಲು 15 ದಿನ ಮುಂಚಿತವಾಗಿ ರಜಾ ಅರ್ಜಿ ನೀಡತಕ್ಕದ್ದು. ವೈದ್ಯಕೀಯ ಉದ್ದೇಶದಲ್ಲಿ ರಜೆಯಲ್ಲಿ ತೆರಳಿದಾಗ ರಜೆ ಅರ್ಜಿಯ ಜೊತೆ ವೈದ್ಯಕೀಯ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಕೊಡತಕ್ಕದ್ದು. ವೈದ್ಯಕೀಯ ಪ್ರಮಾಣ ಪತ್ರದ ಮೇಲೆ ಸಂಶಯ ಬಂದಲ್ಲಿ District Health Officer (DHO) ರವರಿಗೆ ದೃಢೀಕರಿಸುವಂತೆ ಕೇಳಿಕೊಳ್ಳಬಹುದು. ಸುಳ್ಳೆಂದು ಸಾಬೀತಾದರೆ ಅದನ್ನು ದುರ್ವರ್ತನೆ ಎಂದು ಪರಿಗಣಿಸತಕ್ಕದ್ದು. ಒಂದು ವೇಳೆ ಯಾವುದೇ ನೌಕರನು ಅಸೌಖ್ಯವಿಲ್ಲದೆ ಅರ್ಧ ವೇತನ ರಜೆ ಕೋರುತ್ತಾನೆ ಎಂದಾಗಲಿ ಅಥವಾ ಪದೇ ಪದೇ ವೈದ್ಯಕೀಯ ರಜೆ ಮೇಲೆ ಹೋಗುವುದನ್ನು ಒಂದು ಅಭ್ಯಾಸವನ್ನಾಗಿ ಮಾಡಿಕೊಂಡಿರುತ್ತಾನೆ ಎಂಬ ಬಗ್ಗೆ ಅನುಮಾನ ಬಂದಲ್ಲಿ ಅಂತಹ ನೌಕರನನ್ನು ಬ್ಯಾಂಕ್ ನಿಗಧಿಪಡಿಸಿದ ತಜ್ಞ ವೈದ್ಯರಿಂದ ಪರೀಕ್ಷೆಗೆ ಒಳಪಡಿಸಬಹುದು ಹಾಗೂ ಅಗತ್ಯ ಕಂಡು ಬಂದಲ್ಲಿ ಈ ಬಗ್ಗೆ ಬ್ಯಾಂಕಿನ ಸಿಬ್ಬಂದಿ ಶಿಸ್ತು ನಿಯಮಾವಳಿಗಳ ಪ್ರಕಾರ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬಹುದು. | |
| | ಹೆಚ್) ಹೊಸ ಸೇರ್ಪಡೆ | ಹೆಚ್) ಕಾಯಿಲೆ ರಜೆ0ಯಲ್ಲಿರುವ ನೌಕರನು ಆತನು ಪಡೆದ ವೈದ್ಯಕೀಯ ರಜೆಯ ಅವಧಿ ಮುಗಿದ ನಂತರ ಮರಳಿ ಸೇವೆಗೆ ಹಾಜರಾಗಲು, ಅಂಗೀಕೃತವಾದ ವೈದ್ಯರಿಂದ ಪಡೆದ ಶಾರೀರಿಕ ಅರ್ಹತೆಯ ಪ್ರಮಾಣ ಪತ್ರ (Fitness Certificate) ಹಾಜರುಪಡಿಸಬೇಕು. | |
| | (viii) ಹೊಸ ಸೇರ್ಪಡೆ | (viii)ರಜೆ ಮಂಜೂರಾತಿ ಪ್ರಾಧಿಕಾರ: ಪ್ರಧಾನ ವ್ಯವಸ್ಥಾಪಕರು/ಮುಖ್ಯ ಕಾರ್ಯನಿರ್ವಹಣಾಧಿಕಾರಿಯ ಸಾಂಧರ್ಭಿಕ ರಜೆಯನ್ನು ಅಧ್ಯಕ್ಷರು ಮತ್ತು ಉಳಿದ ಎಲ್ಲಾ ವರ್ಗದ ನೌಕರರ ಸಾಂಧರ್ಭಿಕ ರಜೆಯನ್ನು ಪ್ರಧಾನ ವ್ಯವಸ್ಥಾಪಕರು/ಮುಖ್ಯ ಕಾರ್ಯನಿರ್ವಹಣಾಧಿಕಾರಿಯು ಮಂಜೂರು ಮಾಡುವುದು. ಗಳಿಕೆ ರಜೆ, ವೈದ್ಯಕೀಯ ರಜೆ, ಪ್ರಸೂತಿ ರಜೆ, ವೇತನ ರಹಿತ ಇತ್ಯಾದಿ ರಜೆಗಳನ್ನು ಬ್ಯಾಂಕಿನ ಅಧ್ಯಕ್ಷರು ಮಂಜೂರು ಮಾಡುವುದು. | |

| | | | |
|---|---|---|---|
| 68 | **(6) ಗ್ರ್ಯಾಚುಯಿಟಿ :**<br>(i) ಬ್ಯಾಂಕಿನ ಆಡಳಿತ ಮಂಡಲಿಯು, ನಿವೃತ್ತನಾದ ಅಥವಾ ರಾಜೀನಾಮೆಕೊಟ್ಟ ನೌಕರನಿಗೆ ಅಥವಾ ಅವನ ಮರಣದ ನಂತರ ಅವನ ನಾಮಿನಿಗಳಿಗೆ ಅಥವಾ ವಿಧಿಬದ್ಧ ವಾರಸುದಾರರಿಗೆ ಕೆಳಕಂಡ ಷರತ್ತುಗಳಿಗೊಳಪಟ್ಟು ಗ್ರ್ಯಾಚುಯಿಟಿಯನ್ನು ಮಂಜೂರು ಮಾಡತಕ್ಕದ್ದು.<br>(ಎ) ಒಬ್ಬ ನೌಕರನು ಅವನ ಖಾಯಂ ನೇಮಕದ ದಿನಾಂಕದಿಂದ ಐದು ವರ್ಷಗಳೊಳಗೆ ಸೇವೆಯನ್ನು ತೊರೆದಾಗ, ಅವನು ಈ ಸೌಲಭ್ಯದ ಬಗ್ಗೆ ಯಾವುದೇ ಕ್ಲೇಮು ಹೊಂದಿರತಕ್ಕದ್ದಲ್ಲ;<br>(ಬಿ) ಐದರಿಂದ ಹತ್ತು ವರ್ಷಗಳ ಸೇವೆ ಸಲ್ಲಿಸಿರುವ ಒಬ್ಬ ನೌಕರನು ಸೇವೆಗೆ ರಾಜೀನಾಮೆ ಕೊಟ್ಟಾಗ ಅಥವಾ ಸೇವೆಯಿಂದ ನಿವೃತ್ತನಾದಾಗ ಅಥವಾ ಸೇವೆಯಲ್ಲಿರುವಾಗ ಮೃತನಾದಾಗ, ಆತನು ಸಲ್ಲಿಸಿರುವ ಸೇವೆಯ ಪ್ರತಿಯೊಂದು ವರ್ಷಕ್ಕೆ, ಸಂದರ್ಭಾನುಸಾರ, ರಾಜೀನಾಮೆ ಅಥವಾ ನಿವೃತ್ತಿಯ ಅಥವಾ ಮರಣದ ದಿನಾಂಕದಂದು ಅವನು ಪಡೆ–ಯುತ್ತಿದ್ದ ತಿಂಗಳ ವೇತನದ ಅರ್ಧದಷ್ಟನ್ನು ಮೀರದ ಗ್ರ್ಯಾಚುಯಿಟಿ;<br>(ಸಿ) ಹತ್ತು ವರ್ಷಗಳಿಗಿಂತ ಹೆಚ್ಚಿನ ಸೇವೆ ಸಲ್ಲಿಸಿರುವ ಒಬ್ಬ ನೌಕರನು ರಾಜೀನಾಮೆ ಕೊಟ್ಟಾಗ ಅಥವಾ ಸೇವೆಯಿಂದ ನಿವೃತ್ತನಾದಾಗ ಅಥವಾ ಸೇವೆಯಲ್ಲಿರುವಾಗ ಮೃತನಾದಾಗ, ಆತನು ಸಲ್ಲಿಸಿರುವ ಸೇವೆಯ ಪ್ರತಿಯೊಂದು ವರ್ಷಕ್ಕೆ, ಸಂದರ್ಭಾನುಸಾರ, ರಾಜೀನಾಮೆ ಅಥವಾ ನಿವೃತ್ತಿಯ ಅಥವಾ ಮರಣದ ದಿನಾಂಕದಂದು ಅವನು ಪಡೆಯುತ್ತಿದ್ದ ತಿಂಗಳ ವೇತನವನ್ನು ಮೀರದ ಗ್ರ್ಯಾಚುಯಿಟಿ.<br>ಸೂಚನೆ : ವೇತನ ಎಂದರೆ, ನೌಕರನ ಕೊನೆಯ ವರ್ಷದ ಸಕ್ರಿಯ ಸೇವೆಯಲ್ಲಿ ಪಡೆದ ಸರಾಸರಿ ಮಾಸಿಕ ಸಂಬಳ | **((6) ಗ್ರ್ಯಾಚುಯಿಟಿ :**<br>(i) ಬ್ಯಾಂಕಿನ ಆಡಳಿತ ಮಂಡಲಿಯು, ನಿವೃತ್ತನಾದ ಅಥವಾ ರಾಜೀನಾಮೆ ಕೊಟ್ಟ ಅಥವಾ ವಜಾಗೊಂಡ ನೌಕರನಿಗೆ ಅಥವಾ ನೌಕರನು ಮೃತನಾದ್ದಲ್ಲಿ ಅವನ ಮರಣದ ನಂತರ ಅವನ ನಾಮಿನಿಗಳಿಗೆ ಅಥವಾ ವಿಧಿಬದ್ಧ ವಾರಸುದಾರರಿಗೆ ಕೆಳಕಂಡ ಷರತ್ತುಗಳಿಗೊಳಪಟ್ಟು ಗ್ರ್ಯಾಚುಯಿಟಿಯನ್ನು ಮಂಜೂರು ಮಾಡತಕ್ಕದ್ದು.<br>(ಎ) ಒಬ್ಬ ನೌಕರನು ಅವನ ಖಾಯಂ ನೇಮಕದ ದಿನಾಂಕದಿಂದ ಐದು ವರ್ಷಗಳೊಳಗೆ ಸೇವೆಯನ್ನು ತೊರೆದಾಗ, ಅವನು ಈ ಸೌಲಭ್ಯದ ಬಗ್ಗೆ ಯಾವುದೇ ಕ್ಲೇಮು ಹೊಂದಿರತಕ್ಕದ್ದಲ್ಲ;<br>(ಬಿ) ಐದರಿಂದ ಹತ್ತು ವರ್ಷಗಳ ಸೇವೆ ಸಲ್ಲಿಸಿರುವ ಒಬ್ಬ ನೌಕರನು ಸೇವೆಗೆ ರಾಜೀನಾಮೆ ಕೊಟ್ಟಾಗ ಅಥವಾ ಸೇವೆಯಿಂದ ನಿವೃತ್ತನಾದಾಗ ಅಥವಾ ವಜಾಗೊಂಡ ಅಥವಾ ಸೇವೆಯಲ್ಲಿರುವಾಗ ಮೃತನಾದಾಗ, ಆತನು ಸಲ್ಲಿಸಿರುವ ಸೇವೆಯ ಪ್ರತಿಯೊಂದು ವರ್ಷಕ್ಕೆ, ಸಂದರ್ಭಾನುಸಾರ, ರಾಜೀನಾಮೆ ಅಥವಾ ನಿವೃತ್ತಿಯ ಅಥವಾ ವಜಾಗೊಂಡ ಅಥವಾ ಮರಣದ ದಿನಾಂಕದಂದು ಅವನು ಪಡೆಯುತ್ತಿದ್ದ ತಿಂಗಳ ವೇತನದ ಅರ್ಧದಷ್ಟನ್ನು ಮೀರದ ಗ್ರ್ಯಾಚುಯಿಟಿ;<br>(ಸಿ) ಹತ್ತು ವರ್ಷಗಳಿಗಿಂತ ಹೆಚ್ಚಿನ ಸೇವೆ ಸಲ್ಲಿಸಿರುವ ಒಬ್ಬ ನೌಕರನು ರಾಜೀನಾಮೆ ಕೊಟ್ಟಾಗ ಅಥವಾ ಸೇವೆಯಿಂದ ನಿವೃತ್ತನಾದಾಗ ಅಥವಾ ಸೇವೆಯಿಂದ ವಜಾಗೊಂಡಾಗ ಅಥವಾ ಸೇವೆಯಲ್ಲಿರುವಾಗ ಮೃತನಾದಾಗ, ಆತನು ಸಲ್ಲಿಸಿರುವ ಸೇವೆಯ ಪ್ರತಿಯೊಂದು ವರ್ಷಕ್ಕೆ, ಸಂಧರ್ಭಾನುಸಾರ, ರಾಜೀನಾಮೆ ಅಥವಾ ನಿವೃತ್ತಿಯ ಅಥವಾ ವಜಾಗೊಂಡ ಅಥವಾ ಮರಣದ ದಿನಾಂಕದಂದು ಅವನು ಪಡೆಯುತ್ತಿದ್ದ ತಿಂಗಳ ವೇತನದ ಅರ್ಧದಷ್ಟು ಮೀರದ ಗ್ರ್ಯಾಚುಯಿಟಿ.<br>ಸೂಚನೆ :ಗ್ರ್ಯಾಚುಯಿಟಿ ಉದ್ದೇಶಕ್ಕಾಗಿ ವೇತನ ಎಂದರೆ ಮೂಲ ವೇತನ ಹಾಗೂ ತುಟ್ಟಿಭತ್ಯೆ. | ಗ್ರ್ಯಾಚ್ಯುಯಿಟಿ ಬಗ್ಗೆ ಸ್ಪಷ್ಟತೆಯನ್ನು ನೀಡುವ ಸಲುವಾಗಿ |
| 68 | **(7) ಸಿಬ್ಬಂದಿ ವಂತಿಕೆ ಭವಿಷ್ಯ ನಿಧಿ ಮತ್ತು ಬೋನಸ್ :**<br>(ಎ) ಬ್ಯಾಂಕು ತನ್ನ ಸಿಬ್ಬಂದಿ ಉಪಯೋಗಕ್ಕಾಗಿ ನೌಕರರ ಭವಿಷ್ಯನಿಧಿ ಮತ್ತು ಇತರೆ ಉಪಬಂಧಗಳ ಕಾಯ್ದೆ 1952 ಅಥವಾ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ನರ ಅನ್ವಯ ನೌಕರರ ವಂತಿಕೆ ಭವಿಷ್ಯನಿಧಿ ಸ್ಥಾಪಿಸತಕ್ಕದ್ದು; | **(7) ಸಿಬ್ಬಂದಿ ವಂತಿಕೆ ಭವಿಷ್ಯ ನಿಧಿ ಮತ್ತು ಬೋನಸ್ :**<br>(ಎ) ಬ್ಯಾಂಕು ತನ್ನ ಸಿಬ್ಬಂದಿ ಉಪಯೋಗಕ್ಕಾಗಿ ನೌಕರರ ಭವಿಷ್ಯನಿಧಿ ಮತ್ತು ಇತರೆ ಉಪಬಂಧಗಳ ಕಾಯ್ದೆ 1952 ಅಥವಾ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ನರ ಅನ್ವಯ ನೌಕರರ ವಂತಿಕೆ ಭವಿಷ್ಯನಿಧಿ ಸ್ಥಾಪಿಸತಕ್ಕದ್ದು. ಭವಿಷ್ಯ ನಿಧಿ ಕಾಯಿದೆಯ ಪ್ರಸ್ತುತ ರೂ.15,000/– ಅಥವಾ ಬ್ಯಾಂಕ್ ನಿಗದಿಪಡಿಸಿದ ಮೊಬಲಗು ಮಿತಿಗೊಳಪಟ್ಟು ನೌಕರರು ತನ್ನ ಸಂಬಳದ 12% ಹಾಗೂ ಉದ್ಯೋಗದಾತ ಬ್ಯಾಂಕ್ 12% ವಂತಿಗೆಯನ್ನು ಕಾಲಕಾಲಕ್ಕೆ ಪಾವತಿಸಬೇಕು. | ಸಿಬ್ಬಂದಿ ವಂತಿಕೆ ಭವಿಷ್ಯ ನಿಧಿಯ ಬಗ್ಗೆ ಸ್ಪಷ್ಟತೆಯನ್ನು ನೀಡಲು |
| | **(15) ಸಿಬ್ಬಂದಿ ಶಿಸ್ತು ನಿಯಮಾವಳಿಗಳು**<br>**1) ಕರ್ತವ್ಯದುರ್ನಡತೆ / ಕರ್ತವ್ಯ ಲೋಪ :**<br>ಈ ಕೆಳಕಾಣಿಸಿದ ನಡತೆ/ಕರ್ತವ್ಯಲೋಪಗಳು ನೌಕರನದುರ್ವರ್ತನೆ/ದುರ್ನಡತೆ ಎಂದು ಪರಿಗಣಿಸಲ್ಪಡುತ್ತವೆ.<br>(1.– 21.)<br><br>22 ರಿಂದ 33 ಹೊಸ ಸೇರ್ಪಡೆ | **(15) ಸಿಬ್ಬಂದಿ ಶಿಸ್ತು ನಿಯಮಾವಳಿಗಳು**<br>**1) ಕರ್ತವ್ಯದುರ್ನಡತೆ / ಕರ್ತವ್ಯ ಲೋಪ :**<br>ಈ ಕೆಳಕಾಣಿಸಿದ ನಡತೆ/ಕರ್ತವ್ಯಲೋಪಗಳು ನೌಕರನ ದುರ್ವರ್ತನೆ/ದುರ್ನಡತೆ ಎಂದು ಪರಿಗಣಿಸಲ್ಪಡುತ್ತವೆ.<br>(1.– 21.)<br>22. ಕರ್ತ್ಯವ್ಯ ಲೋಪ, ಕರ್ತವ್ಯ ದುರ್ನಡತೆ, ಅನುಚಿತ ವರ್ತನೆ ಇತ್ಯಾದಿ ಅಪಾದನೆ/ಆರೋಪಗಳ ಬಗ್ಗೆ ನೀಡಲಾದ ನೋಟಿಸಿಗೆ ನೌಕರನು ನೀಡುವ ವಿವರಣೆ ಪತ್ರ, ದಾಖಲಾತಿ ಪತ್ರಗಳು, ನೌಕರನು ಬ್ಯಾಂಕಿನ ಸೇವಾ ಸಂಬಂಧವಾಗಿ ಮತ್ತು ಬ್ಯಾಂಕಿನ ಇತರ ವ್ಯವಹಾರಗಳ ಬಗ್ಗೆ ಬ್ಯಾಂಕಿನ ಮೇಲಾಧಿಕಾರಿಗಳಿಗೆ ಹಾಗೂ ಆಡಳಿತ ಮಂಡಳಿಗೆ ಬರೆಯುವ ಕೋರಿಕೆ ಪತ್ರಗಳು, ನಡೆಸುವ ಪತ್ರ ವ್ಯವಹಾರಗಳನ್ನು ಯಾವುದೇ ಕಾರಣಕ್ಕೂ ತನ್ನ ಮೇಲಾಧಿಕಾರಿಗಳಿಗೆ. ಆಡಳಿತ ಮಂಡಳಿಗೆ ಬರೆದ ಪತ್ರಗಳ ಪ್ರತಿಯನ್ನು ಮಾಹಿತಿಗಾಗಿಯೆಂದು ಅಥವಾ ಸೂಕ್ತ ಕ್ರಮಕ್ಕಾಗಿ ಎಂದು ಬ್ಯಾಂಕಿನ ಹೊರಗೆ ಯಾವುದೇ ಸರಕಾರಿ ಇಲಾಖೆ, ಸಹಕಾರಿ ಇಲಾಖೆ ಅಥವಾ ಹೊರಗಿನ ಮೂರನೇ ವ್ಯಕ್ತಿಗೆ ಗುರುತಿಸುವುದು ಅಥವಾ ರವಾನಿಸುವುದು. | ಕರ್ತವ್ಯ ದುರ್ನಡತೆ/ಕರ್ತ್ಯವ್ಯ ಲೋಪದ ಬಗ್ಗೆ ಹೆಚ್ಚುವರಿ ನಿಯಮಾವಳಿಗಳನ್ನು ಅಳವಡಿಸಲು ಹಾಗೂ ಬ್ಯಾಂಕಿನ ಹಿತಾಸಕ್ತಿ ಕಾಪಾಡಲು |

| | | | |
|---|---|---|---|
| | | 23. ಯಾವುದೇ ನೌಕರನು ಬ್ಯಾಂಕಿನ ಆಡಳಿತ ಮಂಡಳಿಯ ಸದಸ್ಯರ ಹಾಗೂ ಬ್ಯಾಂಕಿನ ಮೇಲಾಧಿಕಾರಿಗಳ ವ್ಯಕ್ತಿಗತ ಮಾಹಿತಿಯನ್ನು ಅವರ ಅನುಮತಿ ಇಲ್ಲದೆ ಮೋಸ, ಅಪ್ರಮಾಣಿಕತೆ, ಗೂಢಚರ್ಯೆ ಮೂಲಕ ಸಂಗ್ರಹಿಸಿ ಮೂರನೇ ವ್ಯಕ್ತಿಗೆ ಹಂಚುವುದು, ಪುರಾವೆಯಾಗಿ ಯಾವುದೇ ಇಲಾಖೆಗೆ ಸಲ್ಲಿಸುವುದು ಅಥವಾ ತನಿಖೆಯಲ್ಲಿ ಹಾಜರುಪಡಿಸುವುದು, ಮಾನಹಾನಿಕಾರವಾಗಿ ವರ್ತಿಸುವುದು.<br>24. ಯಾವುದೇ ನೌಕರನು ಬ್ಯಾಂಕಿನ ವಿರುದ್ಧ ಬ್ಯಾಂಕಿಗೆ ಸಂಬಂಧಪಟ್ಟ ವಿಚಾರದಲ್ಲಿ ಮೇಲಾಧಿಕಾರಿಯವರ ಅಥವಾ ಆಡಳಿತ ಮಂಡಳಿ ವಿರುದ್ಧ ಪೋಲೀಸು ಫಿರ್ಯಾದಿ, ಕೋರ್ಟು ದಾವೆ ಹೂಡುವುದು.<br>25. ದಿನಪತ್ರಿಕೆ, ಸಾಮಾಜಿಕ ಜಾಲತಾಣ, ಟಿ.ವಿ. ಮಾಧ್ಯಮದಲ್ಲಿ ಬ್ಯಾಂಕಿನ ಬಗ್ಗೆ ಯಾವುದೇ ರೀತಿಯ ಹೇಳಿಕೆ/ಮಾಹಿತಿ/ಅಪಪ್ರಚಾರ ಮಾಡುವುದು.<br>26. ಬ್ಯಾಂಕಿನ ವಿಷಯಕ್ಕೆ ಸಂಬಂದಿಸಿದ ಯಾವುದೇ ವಿಷಯವನ್ನು ಬ್ಯಾಂಕಿನ ಆಡಳಿತ ಮಂಡಳಿ ಅಥವಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರ ಗಮನಕ್ಕೆ ತರದೆ ಬ್ಯಾಂಕಿನ ವಿರುದ್ಧ ವಿವಿಧ ಇಲಾಖೆಗಳಿಗೆ ದೂರು ನೀಡುವುದು.<br>27. ಬ್ಯಾಂಕಿನ ದಾಖಲೆಗಳನ್ನು ರಹಸ್ಯವಾಗಿ ಪಡೆಯುವುದು, ಇಲ್ಲವೆ ಅನುಮತಿ ಪಡೆಯದೆ ಇತರರಿಗೆ ನೀಡುವುದು/ಇಲಾಖೆಗಳಿಗೆ ನೀಡುವುದು. ಗ್ರಾಹಕರ ಖಾತೆಯ ವಿವರವನ್ನು ರಹಸ್ಯವಾಗಿ ಪಡೆದು ಇನ್ನೊಬ್ಬರಿಗೆ ನೀಡುವುದು.<br>28. ವಿನಾಕಾರಣ ಕರ್ತವ್ಯಕ್ಕೆ ದೀರ್ಘಾಕಾಲಿಕ ರಜೆ ಪಡೆಯುವುದು ಅಥವಾ ಸುಳ್ಳು ವೈದ್ಯಕೀಯ ಪ್ರಮಾಣ ಪತ್ರ ನೀಡಿ ರಜೆ ಪಡೆಯುವುದು.<br>29. ಬ್ಯಾಂಕ್ ನೀಡಿರುವ ಗುರಿಗಳನ್ನು ಸಾಧಿಸದೆ ಕರ್ತವ್ಯ ನಿರ್ಲಕ್ಷ ಮಾಡುವುದು.<br>30. ರಜೆಯಲ್ಲಿ ಇರುವಾಗ ಅನಗತ್ಯವಾಗಿ ಕಛೇರಿಯಲ್ಲಿ ಅಥವಾ ಯಾವುದೇ ಶಾಖೆಯಲ್ಲಿರುವುದು.<br>31. ಅಶಿಸ್ತಿನಿಂದ ವರ್ತಿಸುವುದು, ವಯುಕ್ತಿಕ ನೈರ್ಮಲ್ಯ ಪಾಲಿಸದೇ ಇರುವುದು, ಶುಚಿ ಮಾಡದೆ ಇರುವ ಸಮವಸ್ತ್ರವನ್ನು ಹಾಕುವುದು.<br>32. ರಜೆಯ ಬಗ್ಗೆ ನೀಡುವ ಸುತ್ತೋಲೆಯನ್ನು ಉಲ್ಲಂಘಿಸಿವುದು. ಕರ್ತವ್ಯಕ್ಕೆ ಗೈರು ಹಾಜರಾದರೆ ಅಥವಾ ವಿಳಂಬವಾದರೆ ಮೇಲಾಧಿಕಾರಿಗೆ ಸೂಚಿಸದೆ ಇರುವುದು ಅಥವಾ ಅನುಮತಿ ಪಡೆಯದೆ ಇರುವುದು.<br>33. ಕರ್ತವ್ಯದ ಸಮಯದಲ್ಲಿ ನಿರಂತರವಾಗಿ ಮೊಬೈಲ್ ಫೋನ್ ಅಥವಾ ಬ್ಯಾಂಕಿನ ಫೋನ್ ಸ್ವಂತ ವಿಷಯಕ್ಕೆ ಬಳಕೆ ಮಾಡುವುದು. | |
| 68 | **4) ಶಿಸ್ತು ವಿಚಾರಣೆ ಕ್ರಮ :**<br>1.ಅ) ಹೊಸ ಸೇರ್ಪಡೆ | **4) ಶಿಸ್ತು ವಿಚಾರಣೆ ಕ್ರಮ :**<br>1.ಅ) ಸಾಮಾನ್ಯವಾಗಿ ಪ್ರತಿವಾದ ಮಂಡಿಸಲು ನೌಕರನಿಗೆ ನ್ಯಾಯವಾದಿಯನ್ನು ನೇಮಿಸಲು ಪರವಾನಿಗೆ ನೀಡಬಾರದು. ಮಂಡನಾಧಿಕಾರಿಯು ನ್ಯಾಯವಾದಿ ಆಗಿದ್ದಲ್ಲಿ ಮಾತ್ರ ನೌಕರನಿಗೆ ನ್ಯಾಯವಾದಿಯನ್ನು ನೇಮಿಸಿಕೊಳ್ಳಲು ಅವಕಾಶ ಕೊಡಬಹುದು. ಆದರೆ ನೌಕರನು ತನ್ನ ಸಹೋದ್ಯೋಗಿಯೊಬ್ಬನನ್ನು ಸಹಾಯಕನೆಂದು ನೇಮಕ ಮಾಡಲು ಅನುಮತಿ ನೀಡಬಹುದು. ಇದನ್ನು ನೌಕರನ ಲಿಖಿತ ಕೋರಿಕೆ ಮೇರೆಗೆ ನೀಡತಕ್ಕದ್ದು. | ಸಿಬ್ಬಂದಿ ಸೇವಾ ನಿಯಮಗಳಲ್ಲಿನ ನಿಯಮಗಳನ್ನು ಉಪವಿಧಿಗಳಲ್ಲಿ ಅಳವಡಿಸಲು ಹಾಗೂ ನಿಯಮದಲ್ಲಿ ಸ್ಪಷ್ಟತೆ ನಮೂದಿಸುವ ದೃಷ್ಟಿಯಿಂದ |
| | 4. ಹೊಸ ಸೇರ್ಪಡೆ | 4. ವಿಚಾರಣೆಯ ಸಮಯದಲ್ಲಿ ಒದಗಿಸಿದ ಸಾಕ್ಷಿಗಳ ಆಧಾರದಲ್ಲಿ ದೋಷಾರೋಪಗಳನ್ನು ತಿದ್ದುಪಡಿ ಮಾಡಬೇಕು ಎಂದು ಕಂಡುಕೊಂಡಲ್ಲಿ ಶಿಸ್ತು ಪ್ರಾಧಿಕಾರ ಈ ಮೊದಲು ಮಾಡಿದ ದೋಷಾರೋಪಗಳನ್ನು ತಿದ್ದುಪಡಿ ಮಾಡಬಹುದು. ಆದರೆ ತಿದ್ದುಪಡಿ ಮಾಡಿದ ದೋಷಾರೋಪಗಳ ಮೇಲೆ ನಿರ್ಣಯಗಳನ್ನು ನೀಡುವ ಮೊದಲು ನೌಕರನಿಗೆ ಪ್ರತಿಪಾದಿಸಲು ಸೂಕ್ತ ಅವಕಾಶ ಕೊಡತಕ್ಕದ್ದು. | |
| | 5. ಹೊಸ ಸೇರ್ಪಡೆ | 5. ಒಂದು ವೇಳೆ ವಿಚಾರಣೆ ನಿಧಾನವಾಗುವುದಕ್ಕೆ ಅಪಾಧಿತನೇ ಕಾರಣಕರ್ತನಾಗಿದ್ದಲ್ಲಿ ಅಮಾನಾತ್ತಾದ ನೌಕರನ ಜೀವನ ನಿರ್ವಹಣಾ ಭತ್ಯೆಯು ಶೇ 25ಕ್ಕೆ ಸೀಮಿತವಾಗಿರತಕ್ಕದ್ದು. | |

| | | | |
|---|---|---|---|
| 68 | **(15) ಸಿಬ್ಬಂದಿ ಶಿಸ್ತು ನಿಯಮಾವಳಿಗಳು**<br>**10) ಹೊಸ ಸೇರ್ಪಡೆ** | **(15) ಸಿಬ್ಬಂದಿ ಶಿಸ್ತು ನಿಯಮಾವಳಿಗಳು**<br>**10) ಸೇವೆಯನ್ನು ಕೊನೆಗಾಣಿಸುವುದು:–**<br>ಅ) ತಾತ್ಕಾಲಿಕ ನೌಕರನ ಸೇವೆಯನ್ನು ಮಂಡಳಿಯವರು ಯಾವುದೇ ಕಾರಣ ನೀಡದೇ ಕೊನೆಗೊಳಿಸಬಹುದು.<br>ಆ) ಅರ್ಹತಾ ಪರೀಕ್ಷಾವಧಿಯಲ್ಲಿರುವ ಮೊದಲ ಸಲ ನೇಮಕವಾದ ನೌಕರನ ಸೇವೆಯನ್ನು ಯಾವುದೇ ವೇಳೆಯಲ್ಲಿ ಸೂಚನೆ ಕೊಡದೆ ಕೊನೆಗೊಳಿಸಬಹುದು.<br>ಇ) ಅರ್ಹತಾ ಪರೀಕ್ಷಾವಧಿಯ ನಂತರ ಯಾವುದೇ ವೇಳೆಯಲ್ಲಿ ನೌಕರನನ್ನು ಒಂದು ತಿಂಗಳ ಲಿಖಿತ ಸೂಚನೆ ನೀಡಿ ಅಥವಾ ಇದಕ್ಕೆ ಬದಲಾಗಿ ಒಂದು ತಿಂಗಳ ವೇತನವನ್ನು ನೀಡಿ ಸೇವೆಯಿಂದ ಕೊನೆಗೊಳಿಸಬಹುದು.<br>ಈ) ಬ್ಯಾಂಕಿನ ಮೇಲಧಿಕಾರಿಯ ಆದೇಶವನ್ನು ಪಾಲಿಸದ, ಬ್ಯಾಂಕಿನ ಹಿತಾಸಕ್ತಿಗೆ ದಕ್ಕೆಯಾಗುವಂತಹ ಯಾವುದೇ ಲೋಪಗಳನ್ನು ಎಸಗುವ, ಬ್ಯಾಂಕಿಗೆ ಹಾನಿ ಉಂಟು ಮಾಡುವಂತಹ ಕೃತ್ಯಗಳನ್ನು ಎಸಗುವ ಅಥವಾ ಅಂತಹ ಕೃತ್ಯಗಳಲ್ಲಿ ಭಾಗಿಯಾಗುವ, ಬ್ಯಾಂಕಿನ ಗ್ರಾಹಕರ ಹಿತಾಸಕ್ತಿಗೆ ಧಕ್ಕೆ ಅಥವಾ ಹಾನಿಯಾಗುವಂತಹ ಕೃತ್ಯವನ್ನು ಎಸಗುವ ಯಾವುದೇ ಖಾಯಂ ನೌಕರನನ್ನು ಯಾವುದೇ ವೇಳೆಯಲ್ಲಿ ಒಂದು ತಿಂಗಳ ಲಿಖಿತ ಸೂಚನೆ ನೀಡಿ ಅಥವಾ ಇದಕ್ಕೆ ಬದಲಾಗಿ ಒಂದು ತಿಂಗಳ ವೇತನವನ್ನು ನೀಡಿ ಸೇವೆಯಿಂದ ಕೊನೆಗೊಳಿಸಬಹುದು. | ಸಿಬ್ಬಂದಿ ಸೇವಾ ನಿಯಮಗಳಲ್ಲಿನ ನಿಯಮಗಳನ್ನು ಉಪವಿಧಿಗಳಲ್ಲಿ ಅಳವಡಿಸಲು |
| 72 | **ವಿವಿಧ ಸಾಲಗಳ ವಿವರಣೆ:** ಭಾರತೀಯ ರಿಸರ್ವ್ ಬ್ಯಾಂಕು ಆಗಿಂದಾಗ್ಗೆ ಹೊರಡಿಸುವ ನಿರ್ದೇಶನಗಳ ಅನುಸಾರವಾಗಿ ಮಂಡಲಿಯು ಅಂಗೀಕರಿಸಿದ ಭದ್ರತೆಗಳ ಮೇಲೆ ಅಥವಾ ಈ ಕೆಳಕಂಡ ಆಧಾರಗಳನ್ನು ಪಡೆದು ಸದಸ್ಯರಿಗೆ ಸಾಲ ಮತ್ತು ಮುಂಗಡಗಳನ್ನು, ನಗದುದ್ದರಿ ಮತ್ತು ಮೀರೆಳೆತ ಸಾಲಗಳನ್ನು ಮಂಜೂರು ಮಾಡಬಹುದು. | **ವಿವಿಧ ಸಾಲಗಳ ವಿವರಣೆ:** ಭಾರತೀಯ ರಿಸರ್ವ್ ಬ್ಯಾಂಕು ಆಗಿಂದಾಗ್ಗೆ ಹೊರಡಿಸುವ ನಿರ್ದೇಶನಗಳ ಅನುಸಾರವಾಗಿ ಮಂಡಲಿಯು ಅಂಗೀಕರಿಸಿದ ಭದ್ರತೆಗಳ ಮೇಲೆ ಅಥವಾ ಈ ಕೆಳಕಂಡ ಆಧಾರಗಳನ್ನು ಪಡೆದು ಸಾಲದ ನಿಯಮಾವಳಿ/ನೀತಿಯನ್ನು ರೂಪಿಸಿ, ಸದಸ್ಯರಿಗೆ ಸಾಲ ಮತ್ತು ಮುಂಗಡಗಳನ್ನು, ನಗದುದ್ದರಿ, ಮೀರೆಳೆತ ಸಾಲ ಮತ್ತು ಸ್ವಸಹಾಯ ಸಂಘಗಳಿಗೆ ಸಹ ಸದಸ್ಯತ್ವ ನೀಡಿ ಸಾಲಗಳನ್ನು ಮಂಜೂರು ಮಾಡಬಹುದು. | ಸ್ವಸಹಾಯ ಸಂಘಗಳಿಗೆ ಸಾಲಗಳನ್ನು ನೀಡುವ ಸಲುವಾಗಿ |
| 86 | **ಪಡೆಯುವ ಸಾಲಕ್ಕೆ ಷೇರುಗಳ ಜೋಡಣೆ ಪ್ರಮಾಣ :**<br>ಸದಸ್ಯನಾದವನು ಸಾಲವನ್ನು ಪಡೆಯುವಲ್ಲಿ ಈ ಕೆಳಗೆ ಕಂಡಂತೆ ಷೇರುಗಳನ್ನು ಅಗತ್ಯವಾಗಿ ಪಡೆದಿರಲೇಬೇಕು.<br>(1) ಆಧಾರರಹಿತ ಸಾಲಗಳಾದ ಮೀರೆಳೆತ ಸಾಲ, ನಗದುದ್ದರಿ ಸಾಲ, ಜಾಮೀನಿನ ಮೇಲೆ ಪಡೆದ ಸಾಲ, ಬಿಲ್ಲುಗಳ ಮತ್ತು ಚೆಕ್ಕುಗಳ ಖರೀದಿ ಅಥವಾ ವಟಾವಣಿ ಮಾಡಿ ಸಾಲವನ್ನು ಪಡೆಯುವವರು ಸಾಲದ ಮೊಬಲಗಿನ ಶೇಕಡಾ 5ರಷ್ಟು ಷೇರುಗಳನ್ನು ಪಡೆದಿರತಕ್ಕದ್ದು.<br>(2) ವಾಸ್ತವಿಕ ಭದ್ರತೆಯ ಮೇಲೆ ಸಾಲ ಪಡೆಯುವವರು ಆ ಸಾಲದ ಶೇಕಡಾ ಎರಡೂವರೆಯಷ್ಟು ಷೇರುಗಳನ್ನು ಪಡೆದಿರಬೇಕು.<br>(ಟಿಪ್ಪಣಿ:– ಸಾಲಗಳ ಮೇಲೆ ಷೇರು ಜೋಡಣೆ ಹೊಂದಬೇಕೆಂಬ ನಿರ್ಬಂಧವು ನಾಮಮಾತ್ರ ಸದಸ್ಯರಿಗೆ ಅನ್ವಯಿಸುವುದಿಲ್ಲ) | **ಪಡೆಯುವ ಸಾಲಕ್ಕೆ ಷೇರುಗಳ ಜೋಡಣೆ ಪ್ರಮಾಣ :**<br>ಸದಸ್ಯನಾದವನು ಸಾಲವನ್ನು ಪಡೆಯುವಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ ಕಾಲಕಾಲಕ್ಕೆ ಹೊರಡಿಸುವ ಮಾರ್ಗಸೂಚಿಗಳ ಪ್ರಕಾರ ನಿಗದಿತ ಷೇರುಗಳನ್ನು ಬ್ಯಾಂಕಿನ ಸಾಲ ನೀತಿಗಳಲ್ಲಿ ಅಳವಡಿಸಿದ ದರದಂತೆ ಪಡೆಯಬೇಕು. | ಸ್ಪಷ್ಟತೆಯ ದೃಷ್ಟಿಯಿಂದ |
| | ಎ) **ಇತರೇ ಸಂಸ್ಥೆಗಳಲ್ಲಿ ಸದಸ್ಯತ್ವ :**<br>ಹೊಸ ಸೇರ್ಪಡೆ | ಎ) **ಇತರೇ ಸಂಸ್ಥೆಗಳಲ್ಲಿ ಸದಸ್ಯತ್ವ :**<br>ಬ್ಯಾಂಕಿನ ಹಿತದೃಷ್ಟಿಯಿಂದ ಆಡಳಿತ ಮಂಡಳಿಯು ನಿರ್ಧಾರ ಕೈಗೊಳ್ಳುವ ಯಾವುದೇ ಇತರ ಸಂಸ್ಥೆಗಳಲ್ಲಿ ಸದಸ್ಯತ್ವವನ್ನು ಪಡೆಯಬಹುದು. | ಬ್ಯಾಂಕಿನ ವ್ಯವಹಾರವನ್ನು ವೃದ್ಧಿಸುವ ಸಲುವಾಗಿ |

# Post Centenary Deccenial Celebration

**27-11-2022**





















# M.C.C. BANK LTD

Admin. Office : MCC Bank Bldg, Hampankatta, Mangalore 575 001

**EDUCATION made AFFORDABLE with our Loans...**

*Domestic & Overseas Higher Studies loans at attractive interest & easy terms*

**EDUCATION LOANS just at 8.75%**




Contact your nearest Branch

Hampankatta: 7090701102, 0824-2424306, 2423454
Kankanady : 7090701127, 0824-2437706, 2987706
Ashoknagar : 7090701126, 0824-2458316, 2458716
Morgansgate : 7090701124, 0824-2417756
Kulshekar : 7090701114, 0824-2230585
Moodbidri : 7090701125, 08258-237079
Shirva : 7090701117, 0820-2554544
Bajpe : 7090701123, 0824-2251998
Kinnigoli : 7090701119, 0824-2295900
Surathkal : 7090701120, 0824-2477510
Ullal : 7090701116, 0824-2464300, 2463300
Udupi : 7090701111, 0820-2529666, 2529566
Kundapur : 7090701118, 08254-235200
Puttur : 7090701130, 08251-231323
B.C.Road : 7090701109, 08255-230789
Karkal : 7090701128, 08258-235600

HO Ph : +91 70907 01105 | Toll free No : 1800 123 2966

Email: ho@mccbank.in | Web: www.mccbank.in


**Book Post**
**If Undelivered Please return to :**
**The General Manager**
**MCC Bank Ltd**
**Hampankatta, Mangaluru - 575 001**

**To**